108 ರೀಣಾಂನ್ಮೃದುಸಂದರ್ಭಂತದಿದಂತಾಮ್ರಶಾಸನಂ । ಅಚ್ಯುತೇಂದ್ರಮಹಾರಾಯಶಾಸನಾನ್ಮಲ್ಲಣಾ
109 ತ್ಮಜಃ । ತ್ವಷ್ಟಾಶ್ರೀವೀರಣಾಚಾರ್ಯೋವ್ಯಲಿಖಂತಾಮ್ರಶಾಸನಂ । ದಾನಪಾಲನಯೋರ್ಮಧ್ಯೇದಾನಾ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

110 ಛ್ರೇಯೋನ್ಸ ಪಾಲನಂ । ದಾನಾತ್ಸರ್ಗ್ಗಮವಾಪ್ನೋತಿಪಾಲನಾದಚ್ಯುತಂಪದಂ । ಸ್ವದತ್ತಾದ್ವಿಗುಣಂಪುಂಣ್ಯಂಪರ
111 ದತ್ತಾನುಪಾಲನಂ । ಪರದತ್ತಾಪಹಾರೇಣಸ್ವದತ್ತಂನಿಷ್ಫಲಂಭವೇತ್ । ಸ್ವದತ್ತಾಂಪರದತ್ತಾಂವಾ
112 ಯೋಹರೇತಿವಸುಂಧರಾನ್ । ಷಷ್ಟಿರ್ವರ್ಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿ ।
113 ಏಕೈವಭಗಿನೀಲೋಕೇಸರ್ವೇಷಾಮೇವಭೂಭುಜಾಂ । ನಭೋಜ್ಯಾನಕರಗ್ರಾಹ್ಯಾವಿ
114 ಪ್ರದತ್ತಾವಸುಂಧರಾ ॥ ಸಾಮಾನ್ಯೋಯಂಧರ್ಮಸೇತುನೃಪಾಣಾಂಕಾಲೇಕಾಲೇಪಾಲನೀ
115 ಯೋಭವದ್ಭಿಃಸರ್ವಾನೇತಾನ್‌ಭಾವಿನಃಪಾರ್ಥಿವೇಂದ್ರಾನ್‌ಭೂಯೋಭೂಯೋಯಾಚತೇರಾಮಚಂದ್ರಃ ।

ಶ್ರೀವಿರುಪಾಕ್ಷ.

56

ಬಸರಾಳು ಹೋಬಳಿ ಚಿಕ್ಕಬಲಿ ಗ್ರಾಮದಲ್ಲಿ ಸಿದ್ದೇಗೌಡನ ಮನೆ ಹಿಂದೆ.

ಪ್ರಮಾಣ 4′ × 2′.

1 ಸ್ವಸ್ತಿಶ್ರೀಪ್ರತಾಪಚಕ್ರ
2 ವರ್ತಿಹೊಯಿಸಣಭುಜ
3 ಬಳವೀರಬಲ್ಲಾಳದೇವರಾಜ್ಯಂಗೇದಲು ।

(ಇನ್ನು 20 ಪಙ್ತಿಗಳಿವೆ, ಕಾಣುವದಿಲ್ಲ.)

57

ಅದೇ ಹೋಬಳಿ ಕೆರೆಗೋಡು ಗ್ರಾಮದ ಚನ್ನಕೇಶವ ದೇವಸ್ಥಾನದ ಬಾಗಲಿನ ಕಂಬದಲ್ಲಿ.

1 ಸ್ವಸ್ತಿಶ್ರೀವಿಕ್ರಮ
2 ಸಂವತ್ಸರದಪುಶ್ಯ
3 ಸುದಯಮಾಸಸೋಮ
4 ವಾರದಲುಭಸುರಚ
5 ಲದಂಕರಹೊಲ್ಲಿಗಂ
6 ಡನಮುಗಂಹೊಲ್ಲಿ
7 ದಹೊಲ್ಲಿಗನಕಟಿ

58

ಅದೇ ಗ್ರಾಮದ ಹುಣಗನಕೆರೆ ಹಿಂದೆ ಯಿರುವ ಕಲ್ಲಿನಲ್ಲಿ.

ಪ್ರಮಾಣ 3′ 6″ × 1′ 3″.

1 ಶುಭಮಸ್ತುಶ್ರೀ
2 ವಿಜಯಾಭ್ಯುದಯಶಾ
3 ಲೀವಾಹನಶಕವರುಷ ೧ . . . .
4 ನೆಯಸಂದವರ್ತಮಾನವಿರೋ
5 ಧಿಸಂವತ್ಸರದಕಾರ್ತೀಕ
6 ಶು ೧ರಲ್ಲಿಶ್ರೀಮತು
7 ತ್ರಿಸಾಸಿರನಹರಬಾನೂ
8 ರಚಿಕ್ಕಕಪಯನವರುಕೆಱ
9 ಗೋಡಹಣುಗನಕೆಱೆತೂವಿನಕೆಲ
10 ಗೆಹಾಕಿದಭೂದಸವಂದತೆರಗಣ
11 ನೆರವಿನಹಣಕೆಱೆಗೆಅದೆಲರುಕಸು
12 ಕೊಂಡುನಾಯಮಾಂಸೆ
13 ತಿಂದಹಾಗೆಕತ್ತೆತುಂ
14 ಣೆತಿಂದಹಾಗೆ

59

ಅದೇ ಹೋಬಳಿ ದನ್ನಾಯಕನಪುರದ ಬಸವನ ದೇವಾಲಯದ ಮುಂದೆ ಯಿರುವ ಕಲ್ಲಿನಲ್ಲಿ.

ಪ್ರಮಾಣ 3′ 6″ × 3′.

1 ಶ್ರೀಗಣಾಧಿಪತಿಯಂನಮಃನಮಸ್ತುಂಗಶಿರಸ್ಚುಂಬಿಚಂದ್ರ
2 ಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

3 ಶ್ರೀಮಂಮಹಾರಾಜಾಧಿರಾಜರಾಜಪರಮೇಶ್ವರಶ್ರೀಪಂಪಾವಿರೂಪಾಕ್ಷ
4 ದೇವರದಿವ್ಯಶ್ರೀಪಾದಪದ್ಮರಾಧಕರುಮಪ್ಪಮಳಿಕಾರ್ಜನರಾಯಮ
5 ಹಾರಾಯರುಶ್ರೀಮಂಮಹಾಪ್ರಧಾನತಿಂಮಣದಂಣಾಯಕ
6 ರುಸಹವಾಗಿನರಸಿಂಗನರಾಜಕಾರ್ಯಕೆಪೆನಗುಂಡೆಯೊಳುಸುಕ
7 ದಿಂರಾಜ್ಯಂಗೆಯಿಉತ್ತಿದ್ದಲ್ಲಿಸಕವರುಷ ೧೩೪೮ನೆಯಬಹುಧಾ
8 ನ್ಯಸಂವತ್ಸರದಮಾಘಸು ೫ ಲುಶ್ರೀಮಳಲಿಗನಲಕಪ್ಪನವರಮಗತಿ
9 ಪ್ಪಂಣ್ಯಾವರಾರಾಯರುದಣಾಯ್ಯಕಸೀಮೆಯಂಬಪ್ಪಡೆಅವರಚಿ
10 ತ್ತ ಮಂಪಡದುಬೆಳತೂರಶ್ರೀರಾಮೆಮದೇವರಿಗೆಅಮೃತಪಡಿಅಂ
11 ಗಗಂಗವಿಭವಗಳು . . . . ಮರಿಯಾದೆದಾಯರದಣಾ
12 ಯರವರುಕೂಡಿಂಕೆಳಲೆಯನಾಡಂದಸ್ತಳದಬಸವಪ್ಪ
13 ದಾರೆಯಂಪಡದು . . . .

(ಇನ್ನು 8 ಪಙ್ತ್ತಿಗಳು ಇವೆ, ಕಾಣುವದಿಲ್ಲ.)

60

ಅದೇ ಹೋಬಳಿ ಮಾರಗೋನಹಳ್ಳಿ ಗ್ರಾಮದ ವೀರಕಲ್ಲು ಗುಡಿಯಲ್ಲಿರುವ ಕಲ್ಲಿನಲ್ಲಿ.

ಶ್ರೀವಿರುಪಾಕ್ಷ.

2 ಪಙ್ತ್ತಿ ನಾಗರಾಕ್ಷರದ ಯಂತ್ರ.

1 ಮಚ್ಯುತಭುಯೋ . . . . ಪಯೋಧರ
2 . . . . ಕಂದರವಾಸುದುದಾನಪಾಲನಯೋ
3 ರ್ಮ್ಮಧ್ಯೇದಾನಾತ್ಶ್ರೇಯೋನುಪಾಲನಂದಾನಾತ್ಸ
4 . . . . . . ಪಾಲನಾದಚ್ಯುತಂಪದಂ
5 ಸ್ವದತ್ತಾಂಪರದತ್ತಾಂವಾಯೋಹರೇತುವಸುಂ
6 ಧರಾಂಶಷ್ಟಿರ್ವಷಸಹಸ್ರಾಣಿವಿಷ್ಟಾಯಾಂ
7 ಜಾಯತೇಕ್ರಿಮಿಃ ಶ್ರೀ

61

ಅದೇ ಹೋಬಳಿ ಮುದ್ದನಗೆರೆ ಗ್ರಾಮದ ಬಸವನಗುಡಿಯ ಪಶ್ಚಿಮದಲ್ಲಿರುವ ಕಲ್ಲಿನಲ್ಲಿ.

ಗ್ರಂಥ ಮತ್ತು ಅರವಾಕ್ಷರ.—ಪ್ರಮಾಣ 4′ 6″ × 3′ 6″.

62

ಅದೇ ಹೋಬಳಿ ರಾಯಶೆಟ್ಟಿಪುರದ ಸೋಮೇಶ್ವರ ದೇವಸ್ಥಾನದ ಪೂರ್ವಕ್ಕೆ ಭೂಮಿಯಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 4′ 8″ × 3′.

1 ಸ್ವಸ್ತಿನಮಸ್ತುಂಗಶಿರಸ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲ
2 ಸ್ತಂಭಾಯಸಂಭವೇ ॥ ಸ್ವಸ್ತಿಶ್ರೀಮನ್ನುಮಹಾಮಹಿಮನಪ್ಪಶ್ರೀಕೈಲಾಸಪುರವರಾಧೀಸ್ವರಂ
3 ಮರ್ತ್ಯಕಿರಳಚಂಚಸೋಮಾಳಿತದಸಭುಜಪಂಚವಕ್ತ್ರಪರಮೇಸ್ವರನವೋಲಗದಭೃಂಗೀಶ
4 ಚಂಡೀಸಮುಕ್ಯಪಾದಸಾಲೋಕ್ಯಸಾಮೀಪ್ಯಸಾರೂಪ್ಯಸಾಯುಜ್ಯಪದವಿಯಂಹ
5 ಡದದೇವಲೋಕದದೇವಗಣಂಗಳುವೀರಭದ್ರವೀರಸೋಮನಾಥದೇವರಪ್ರನವ
6 ಗಳು ॥ ಸ್ವಸ್ತಿ(ಶ್ರೀ)ಮನುಮಹಾಮಂಡಳೇಸ್ವರಂತಳಕಾಡುಗಂಗವಾಡಿನೊಣಂಬವಾಡಿಬನವಾಸೆ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

ವೃಚಂಗಿಕೊಂಗುನಂಗುಲಿಗೊಂಡವೀರಭುಜಬಲವೀರಗಂಗನಸಹಾಯಸೂರಸನಿವಾರಸಿದ್ಧಿಗಿರಿದುರ್ಗ್ಗಮಲ್ಲನಿಸಂಕಪ್ರತಾಪಹೊಯಿಸಳವೀರಬಲ್ಲಾಳದೇವದೊರಸಮುದ್ರದನೆಲಬೀಡಿನಲ್ಲಿಸುಖಸಂಕಥಾವಿನೋದದಿಂರಾಜ್ಯಂಗೆಯುತ್ತಮಿರೆಸಕವರಿಸದಸಕವರಿಸ ೧೧೦೩ ವಿಸ್ವಾವಸವತ್ಸರದಚೈತ್ರಸು ೧ ಮಂಗಳಕೆಱೆಗೋಡೆನಾಡಬಿಟಿರಕಾಡೆಯುಮಲ್ಲೆಯನಾಯಕಸೋಮೆಯನಾಯಕತಂಮಹಳ್ಳಿಯಸಿವಪುರವಾಗಿಭಕ್ತರಿಗೆದಾರಾಪೂರ್ವಕಂಮಾಡಿಕೊಟ್ಟುದದರ್ಮ್ಮವನುಮಾದೆಯನಾಯಕಬಲುಹಿಂದೆಸಿವನಾಬಿಡದಡೆವೀರಮಲಯ್ಯಕುತ್ತಿಕೋಡುನಾಲುಸೀಮೆಯಕಲ್ಲಕಂಡುಮಾದೆಯನಾಯಕಯ್ಯಲುಸಿವಪುರವಕೊಂಡುಸೋಮನಾಥಪುರವಾಗಿಮಾಡಿದರು ॥ ಸ್ವಸ್ತಿಶ್ರೀಮನುಮಹಾಮಂಡಳೇಸ್ವರಂಪ್ರಿಥ್ವಿವಲ್ಲಭಂಮಹಾರಾಜಾಧಿರಾಜಂದ್ವಾರಾವತೀಪುರವರಾಧೀಸ್ವರಂಯಾದವಕುಳಾಂಬರದ್ಯುಮಣಿಸರ್ವ್ವಜ್ಞಚೂಡಾಮಣಿಮಲೆರಾಜರಾಜಮಲಪರೊಳುಗಂಡಗಿರಿದುರ್ಗ್ಗಮಲ್ಲಕದನಪ್ರಚಂಡಸನಿವಾರಸಿದ್ಧಿಚಲದಂಕರಾಮಮಗರರಾ(ಜ್ಯ)ನಿರ್ಮ್ಮಳಚೋಳರಾಜ್ಯಪ್ರತಿಷ್ಠಾಚಾರ್ಯ್ಯಪಾಂಡ್ಯರಾಜ್ಯಸ್ತಾಪನಾಚಾರ್ಯ್ಯನಿಸಂಕಪ್ರತಾಪಚಕ್ರವರ್ತ್ತಿಹೊಯಿಸಳವೀರಸೋಮೇಸ್ವರದೇವರಸುಕಣನೂರಲ್ಲಿಸುಖದಿರಾಜ್ಯಂಗೆಯುತ್ತಮಿರೆ । ಸಕವರ್ಷದ ೧೧೬೮ ಸಾಧಾರಣಸವತ್ಸರದಚೈತ್ರಸುದ ೫ ಮಂಗ । ಮಾಡಿದಆಸಂಖ್ಯಾತಮಹಾರತಾಂಗದುವೀರಭದ್ರದೇವರುಮುಖ್ಯವಾದವೀರಸೋಮನಾಥಪುರದವ್ರಿತ್ತಿಮೂವತ್ತು ಸೋಮನಾಥದೇವರವ್ರಿತ್ತಿಸ್ತಾನಾಪತಿಮಾಡಿರಾಜಗುರುಗಳಿಗೆವ್ರಿತ್ತಿ ೧ ಕೆಲಗೆದೇವಾಲ್ಯಕೆಯುವನುಯಿಕ್ಕು ವನಲ್ಲ । ಕರಸ್ತಳದಬಸವಿದೇವಂಗೆವ್ರಿತ್ತಿ ೨ ನೀಲಕಂಠದೇವಂಗೆವ್ರಿತ್ತಿ ೨ ಸೇನಬೋವಸಿದ್ದಯ್ಯಂಗೆವ್ರಿತ್ತಿ ೨ ಅಪ್ಪಯ್ಯಂಗೆವ್ರಿತ್ತಿ ೨ ಸಾರಿದೇವನಕುಮಾರಮಾದಯ್ಯಗೆವ್ರಿತ್ತಿ ೨ ಸಂಭುದೇವಂಗೆವ್ರಿತ್ತಿ ೧ ಮತ್ತಮಾಗದಮಲ್ಲದೇವಂಗೆವ್ರಿತ್ತಿ ೧ ಬಸವಿದೇವನಕಲಿಯಂಗೆವ್ರಿತ್ತಿ ೧ ಹರದಯ್ಯನಮಗಮುತ್ತಗೆಕೆಱೆಯಸೋಮಯಗೆವ್ರಿತ್ತಿ ೧ ಚೈಚವ್ವೆಯಮಗಕುಂಬಯ್ಯಂಗೆವ್ರಿತ್ತಿ ೧ ವಿರಟಯ್ಯನಮಗಕರಯ್ಯಂಗೆವ್ರಿತ್ತಿತಾನೇಸ್ವರಬಂಮಯ್ಯಂಗೆವ್ರಿತ್ತಿ ೧ ಕೇಶಿಯಸೋಮಯ್ಯಂಗೆವ್ರಿತ್ತಿ ೧ ಹಿಂದಡಂಗಯ್ಯನಮಾರಯ್ಯಪ್ರಮಥಯ್ಯಂಗೆವ್ರಿತ್ತಿ ೧ ಆಭಯನವೀರಯ್ಯಗೆವ್ರಿತ್ತಿನೀಲಕಂಠದೇವನರಗಚಾಮಯ್ಯಂಗೆವ್ರಿತ್ತಿ ೧ ಪಟ್ಟಯ್ಯನವಿಶ್ವಯ್ಯಂಗೆ

(ಇನ್ನು 12 ಪಙ್ತಿ ವೃತ್ತಿಗಳ ವಿವರ.)

63

ಮಂಡ್ಯಕ್ಕೆ ಪೂರ್ವದಿಕ್ಕಿನಲ್ಲಿ ತಿರುಮಲಾಚಾರ್ಯರ ಕೊಳದ ಆಗ್ನೇಯ ಮೂಲೆಯಲ್ಲಿ.

ಗ್ರಂಥ ಮತ್ತು ಅರವಾಕ್ಷರ.—ಪ್ರಮಾಣ 1′ 2″ × 1′ 6″.

64

ಅದೇ ಕೊಳದ ನೈರುತ್ಯ ಮೂಲೆಯಲ್ಲಿ.

ಪ್ರಮಾಣ 1′ 2″ × 1′ 6″.

ಶುಭಮಸ್ತು ಸ್ವಸ್ತಿಶ್ರೀವಿಜಯಾಭ್ಯುದಯಶಾಲಿವಾಹನಶಕವರ್ಷ ೧೩೩೨ ಸಂದವರ್ತ್ತಮಾನಪ್ರಮೋದೂತಸಂವತ್ಸರದವೈಶಾಖಬ ೫ ಬುಧವಾರಉತ್ರಾಷಾಢನಕ್ಷತ್ರದಲ್ಲುಶ್ರೀರಂಗಪಟ್ಟಣದತಿರುಮಲೆಅನಂದಾಂಪಿಳ್ಳೆಗೋವಿಂದರಾಜರಕುಮಾರರುತಿರುಮಲಾಚಾರ್ಯ್ಯರಧರ್ಮ್ಮ ॥ ಯಿಸರಸ್ವಾಗೋವಿಂದರಾಜಪು . . . . . ಯಿತೋಪುಗೋವಿಂದರಾಜೋದ್ಯಾನ ।

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

65—66

ಅದೇ ಕೊಳದ ವಾಯುವ್ಯ ಮತ್ತು ಈಶಾನ್ಯ ಮೂಲೆಗಳಲ್ಲಿ.

ಮೇಲಿನಂತೆಯೇ ನಾಗರಾಕ್ಷರದಲ್ಲಿ ಬರೆಯಲ್ಪಟ್ಟದೆ.

67

ಅದೇ ಗ್ರಾಮದ ಶ್ರೀಸಿವಾಸರಾಯರ ಸತ್ರದಲ್ಲಿ ದಕ್ಷಿಣಕಡೆ ಮುಖ್ಯಪ್ರಾಣ ದೇವಾಲಯದ ವೊಳಬಾಗಲಬಳಿ ಎಡಕಡೆ ನೆಟ್ಟಕಲ್ಲಿನಲ್ಲಿ.

ಪ್ರಮಾಣ 2′ × 1′ 3″.

ಶ್ರೀ

ಶ್ರೀನಿವಾಸ *

[1]ಸ್ವಸ್ತಿಶ್ರೀವಿಜಯಾಭ್ಯುದಯಶಾ
[2]ಲೀವಾಹನಶಕಾಬ್ದಾ ೧೭೬೯
[3]ನೆಸಂದವರ್ತಮಾನವಾದಪ್ಲವ
[4]ಂಗಸಂವತ್ಸರದನಿಜಜ್ಯೇಷ್ಟಶುದ್ಧ
[5]೧೫ ಸೋಮವಾರದವರಿಗೆಯಿಪ್ರಾ
[6]ಣದೇವರದೇವಸ್ಥಾನಸರೋವರಜನ
[7]ಗಳಿಗೆಉಪಯೋಗವಾಗಿಕಟ್ಟಿಸಿದು
[8]ಯರಡುಮನೆಯುಯಿದಕ್ಕೆಸೇರಿದ
[9]ನಂಗವನಯಿದರಲ್ಲಿಯಿರತಕ್ಕತೆಂಗಿ
[10]ನಗಿಡಸಹದೇವರಿಗೆಉಪಯೋಗವಾಗಿ
[11]ಯಿಧರ್ಮನಿರಂತರಶಾಶ್ವತವಾಗಿನ
[12]ಡಸತಕ್ಕ ಅಭಿಜ್ಞರಿಗೆಉಂಟಾಗುವಫ
[13]ಲ | ಸ್ವದತ್ತಾದ್ವಿಗುಣಂಪುಣ್ಯಂಪರ
[14]ದತ್ತಾನುಪಾಲನಂ | ಪರದತ್ತಾಪ
[15]ಹರೇಣಸ್ವದತ್ತಂನಿಷ್ಫಲಂಭವೇತೂ |
[16]ಮಂಡ್ಯತಾಲೋಕುಅವಿಾಲಕಾಶ್ಯಪಗೋ
[17]ತ್ರತಿರುಕುಡಿಶ್ರೀನಿವಾಸರಾವುವಿಜ್ಞಾಪನೆ

68

ಅದೇ ಗ್ರಾಮದ ಕೆರೆಯ ದಕ್ಷಿಣಕೋಡಿಯಲ್ಲಿರುವ ವೀರಕಲ್ಲಿನಲ್ಲಿ.

[1]ರಕ್ತಾಕ್ಷಿವತ್ಸರದಚೈತ್ರಸು ೧೦ ಸುಸಿತೊ
[2]ಜನವುಗಲರುಳಿಯೊಜಂಗೆದುಡೊಜನುನಿಲಿಸಿದವೀರಗಲ್ಲು ಶ್ರೀ ಶ್ರೀ

69

ಅದೇ ಹೋಬಳಿ ಹಳಿ ಬೂದನೂರು ಗ್ರಾಮದ ಸೋಮೇಶ್ವರ ಗುಡಿಯ ಮುಂಭಾಗದಲ್ಲಿ ಯಿರುವ ಕಲ್ಲಿನಲ್ಲಿ.

ಎರಡು ಕಡೆಯಲ್ಲೂ ಬರೆದಿಧೆ.—ಪ್ರಮಾಣ 3′ 9″ × 1′ 4″.

[1]ಸಕವರ್ಷ
[2]೧೪೮೪
[3]ನೆಯರೂ
[4]ದಿರೋದ್ಗಾರಿ
[5]ಸಂವತ್ಸರದ
[6]ಕಾರ್ತ್ತಿಕಬ. . . .
. . . .
[17]ಸೋಮಸೆಟ್ಟಿಯಂ. . . . . .ನಮಗ
[18]ಕೀರ್ತ್ತಿಸೆಟ್ಟಿ. . . . . .

* ಈ ಎರಡು ಪಙ್ತಿ ನಾಗರಾಕ್ಷರದಲ್ಲಿವೆ.

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

70

ಅದೇ ಹೋಬಳಿ ಹೊಸ ಬೂದನೂರು ಗ್ರಾಮದ ಕೇಶವ ದೇವಸ್ಥಾನವೆಂದು ಕರೆಯಲ್ಪಡುತ್ತಿರುವ ಅನಂತಪದ್ಮನಾಭದೇವರ ಗುಡಿಯ ವಳಪಾರ್ಶ್ವ ದಕ್ಷಿಣಕಡೆಯಲ್ಲಿ.

ಪ್ರಮಾಣ 4′ 7″ × 1′ 11″.

1 ಸ್ವಸ್ತಿಸಮಸ್ತಪ್ರಸಸ್ತಿಸಹಿತಂಶ್ರೀಮತುಪ್ರತಾಪ
2 ಚಕ್ರವರ್ತ್ತಿಹೊಯ್ಸಳಭುಜಬಲಶ್ರೀವೀರನಾರಸಿಂ
3 ಹದೇವರಸರುಪ್ರಿತ್ವಿರಾಜ್ಯಂಮಾಡುತ್ತಿದಲಿ ॥ ಸಕವರುಷ ॥
4 ಸಾವಿರದನೂಱತೊಂಭತ್ತಎಂಟನೆಯ ॥ ಧಾತುಸಂ
5 ವತ್ಸರದಪುಸ್ಯಸು ೧ ಸೋದಂದುಸ್ವಸ್ತಿಸಮಸ್ತಪ್ರಸಸ್ತಿಸಹಿ
6 ತಂಶ್ರೀಮದುದುಭವಸರ್ವ್ವಜ್ಞಪದುಮನಾ
7 ಭಪುರದಶ್ರೀಮದಸೇಷಮಹಾಜನಂಗಳಿಗೆಯಾ
8 ದವನಾರಾಯಣಪುರವಾದಸುತ್ತಲಕೇಶವದೇವರಸ್ಥಳಿಕ
9 ನಂಬಿಪಿಳ್ಳೆಯಮಗಪುರುಷೋತ್ತಮದೇವನೂಅವರಂ
10 ಣಲಆದೂರನಮಗನಂಬಿಪಿಳ್ಳೆಯಿಂತ್ತಿಬರೂಕೊಟ್ಟಶಾಸ
11 ನಕ್ರಮವೆಂತೆಂದಡೆಆಕೇಶವದೇವರದೇವದಾನದವೂ
12 ರುಮರಕಾಡನನುಕುಡಿನಿಂತಾದೇವದಾನವಾಗಿಮಕ್ಕ
13 ಳುಮಕ್ಕಳುತಪ್ಪದೆಆಚಕತುಸ್ಸೀಮಾಸನುನ್ವಿತವ
14 ಹಆಮರಕಾಡನಗದೆಬೆದಲೊಳಗಾದಭೂಮಿಯೊಳಗೆತೆಂ
15 ಗುತವುಂಗುಮುಖ್ಯವಾದಸಮಸ್ತಸ್ಥಾವರವಹಫಲವೃ
16 ಕ್ಷಂಗಳನೂಯಿಕ್ಕಿಕೊಂಡುಕೆಱೆವಾಕಟ್ಟಿಕೊಂಡುಕಾಲುವೆ
17 ಯನೂತಂದುಕೊಂಡುಸಂತಾನಗಾಮಿಯಾಗಿಭೋಗಿಸುವರು
18 ಆಕ್ಷೇತ್ರದೊಳಗೆಆಕೇಶವದೇವರಅಮ್ರಿತಪಡಿಗೆಆಕೆಱೆಯಹಿಂದೆಗದ್ದೆ
19 ಸಲಗೆಮೂಱುಬೆದಲುಅಯಿನೂಱುಮಾಕೊಂಡಆವೋರಿಂಗೆ
20 ಸಿದ್ಧಾಯಕಟ್ಟಗುತ್ತಗೆವರುಷಂಪ್ರತಿಗದ್ಯಾಣಹತ್ತನೂಕಟ್ಟುಕತ್ತ
21 ಗೆಪಿಂಡಾದಾನಸರ್ವ್ವಬಾಧೆಪರಿಹಾರವಾಗಿಮಾಡಿ । ಆದೇ
22 ವರಚೈತ್ರಪಯಿತ್ರದಪರ್ವ್ವಕ್ಕೆವರುಷಂಪ್ರತಿನೂಲುಹಲ
23 ಹತ್ತುಅಕ್ಕಿಕೊಳಗಹತ್ತುಬೆಂಣೆಕೊಳಗಎರಡುಯಿಮರಿಯಾದೆಯ
24 ಲೆಂಗೆಂದಿಗೆವೂಆಚಂದ್ರಾರ್ಕ್ಕಸ್ಥಾಯಿಯಾಗಿಕೊಂಡುಆಮಹಾ
25 ಜನಂಗಳಿಗೆಆಚಂದ್ರಾರ್ಕ್ಕಸ್ಥಾಯಿಯಾಗಿಭೋಗಿಸುವಂತಾಗಿಕೊಟ್ಟಶಾಸನ
26 ಮಂಗಳಮಹಾ ಶ್ರೀ ಶ್ರೀ ಶ್ರೀ ॥ ಯಿಂತಪ್ಪುದಕ್ಕೆಸಾಕ್ಷಿಗಳುಸರ್ವ್ವಜ್ಞ
27 ವೀರನರಸಿಂಹಪುರದಿಗಲರಕೆಱೆಯಮಹಾ . . . .
28 ಜನಂಗಳು । ಬಲ್ಲಾಳುಚತುರ್ವ್ವೇದಿನರಸಿಂಹಪುರವಾದವು
29 ದೂರಮಹಾಜನಂಗಳುಶ್ರೀಮದನಾದಿಯಗ್ರಹಾರಂ
30 ಹಿರಿಯಅರ್ಸನಕೆಱೆಯಮಹಾಜನಂಗಳುಶ್ರೀಮದನಾ
31 ದಿಯಗ್ರಹಾರಂಮಂಡಿಯದಮಹಾಜನಂಗಳುಮಲ್ಲಿಕಾ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

32 ಜ್ಞ್ನನಪುರವಾದಗುತ್ತಲಮಹಾಜನಂಗಳುಇಂತಿವರು

33 ಭಯಾನುವುಥದಿಂಪತ್ರಸಾಸನವನೋಡಬರದಲಚಾರಿವು

34 ಸನೋಜ ॥ ಶ್ರೀಲಕ್ಷ್ಮೀನರಸಿಂಹ (ಗ್ರಂಥಾಕ್ಷರದಲ್ಲಿ)

35 ಶ್ರೀಸರ್ವಜ್ಞ ಶ್ರೀನರಸಿಂಹ

36 ಶ್ರೀಮಲ್ಲಿಕಾರ್ಜುನ (ನಾಗರಾಕ್ಷರದಲ್ಲಿ)

71

ಅದೇ ಹೋಬಳಿ ಉಮ್ಮಡಹಳ್ಳಿ ಊರಬಾಗಲ ಬಳಿಯ ಜಗತೀಕಟ್ಟೆಯ ಮೇಲೆ ಯಿರುವ ಕಲ್ಲಿನಲ್ಲಿ.

1 ಶುಭಮಸ್ತುಸ್ವಸ್ತಿಶ್ರೀವಿಜಯಾಭ್ಯುದ

2 . . . . ೧೬೫೬ ನೆಯಕಾ

. . . .

9 ಚತುಸ್ಸಿಮೆವೊಳಗಾದಗದ್ದೆ ಬೆದ್ದಲು

10 ಸಿದ್ಧಸಾಧ್ಯಂಗಳೆಂಬಅಷ್ಟ

. . . .

13 ನಿಂಮಪುತ್ರಪಉತ್ರಪಾರಯ

15 . . . . ಕೆಯಉಂಬ

72

ಅದೇ ಹೋಬಳಿ ಸಾತನೂರ್ ಗ್ರಾಮದ ನರಸಿಂಹ ದೇವರ ಬೆಟ್ಟಕ್ಕೆ ಹತ್ತುವ ಮೆಟ್ಲುಗಳ

ಪೂರ್ವಪಾರ್ಶ್ವದಲ್ಲಿ ಆಂಜನೇಯ ಗುಡಿಯ ಯೆದುರಿಗಿರುವ ಕಲ್ಲಿನಲ್ಲಿ.

1 ಬಹುಧಾನ್ಯಸಂವತ್ಸರದಬಾ

2 ದ್ರಪದಶು ೫ ರಲುಗಂಗಯದಣ್ಣಾಯಕಬಸ

3 ವರಸರಮಯಿದುನಂವೀರಸಂಕರಸರನಿರೂಪದಿಂ

4 ಕುಪಂದಣಾಯಕರುನಿರೂಪದಿಂದಸಿಂಗಯನಶ್ರೀಕಂ

5 ಭದತಿರುಮಲದೇವರ್ಸ್ವರತೋತ್ಸದ . . . . ಬಿಟ್ಟುಕೊಟ್ಟ

6 ಬೆಟ್ಟದಬಳಿನಾಲ್ಕುದಿಕ್ಕಿನಶಂಖ

7 ಚಕ್ರದಕಲ್ಲುವೊಳಗಾದಯೆರೆ

8 ಯಿಹೊಂನಿನವೊಳಿಗೆ

9 ಆರಾದರು . . . .

73

ಅದೇ ಹೋಬಳಿ ಕಿರಗುಂದೂರು ಗ್ರಾಮದ ಬೋರೇಗೌಡನ ಕಟ್ಟೆಹಳ್ಳದಲ್ಲಿ ಯಿರುವ ಕಲ್ಲಿನಲ್ಲಿ.

ಪ್ರಮಾಣ 2′ 9″ × 1′ 8″.

1 ಶ್ರೀಧಾತುಸಂವತ್ಸರದಚೈತ್ರಸು ೧ ಸೆಕಿ

2 ಬುಗುಂದುರಗುಳಯನಮಗಲಕ್ಕ

3 ಯ್ಯಮಂಚಯನಮಗಆದಿಮಂಡ

4 ಳಕಾಜನಮಗಕೊಲೊಜಕಟಿಸಿ

5 ದಕೆಜಿಕೆಕಟೆಗೆಬಿಟ್ಟಕೊಡಗೆ

6 ಸ ೧ ಕಂಭೂಮಿಯಬೈರು

7 ವಇಂದಾಗ್ರಾಇಕುವರು

8 ಗೌಡುಗಳುದವಪ

9 ಇದಅಳಿಹ

10 ಲಿಹೂಸುರುವು

11 ದುಕಸರಿದೇವನ

12 ಬರಹಶ್ರೀಸೋ

13 ಮನಾಥ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

74

ಅದೇ ಹೋಬಳಿ ಜೀಗುಂಡಿಪಟ್ಣದ ಚಂದ್ರಮೌಳೇಶ್ವರ ಗುಡಿಯ ಯೆದುರುಪಾರ್ಶ್ವದ ಚಿಕ್ಕಕಲ್ಲು ಕಂಬದ ಯೆರಡು ಪಾರ್ಶ್ವಗಳಲ್ಲಿ ಯಿರುವದು.

ಪ್ರಮಾಣ 3′ 9″ × 1′ 3″.

(4 ಪಙ್ತಿಗಳು ಸುತರಾಂ ಕಾಣುವದಿಲ್ಲ.)
5 ರಸುಮಹಾನಾ
6 ಯಕವಡೇರುಸಂ .
7 . . . . ಯಿ.ರನ
8 . . . . ಚಿಕ್ಕಮಾಸಾಗಹು
9 ಲಿವಾನದಮಾದಿಗೌಡ
10 ಮಂಚಿಗೌಡಪ್ರೊಳಗಾದಪ .
11 . . . . ಳಗಳಗಲುಡುಪ್ರಜೆಗ
12 ಳೆಲ್ಲಾ ಹುಲಿವಾನಪಟ್ಟಣ
13 ದ . . . . ಮಾನಿಸಸೆಟ್ಟಿ
14 ೦ಗೆಯಂ . . . . ಹೂ
15 ಲರಿಗೆಯೂಕೊಟ್ಟಶಿಲಾ
16 ಶಾಸನದಕ್ರಮವೆಂತೆಂದ
17 ಡೆಶಕವರ್ಷ ೧೦೪೭ನೆಯ
18 ರೌದ್ರಿಸಂವತ್ಸರದವು
19 ಷ್ಯಶು ೧ . . . . ಮಾ
20 ನಿಸಸೆಟ್ಟಿಯರಮರೆ
(ಮೇಲುಭಾಗ ಕಾಣುವದಿಲ್ಲ.)
21 ತಲೆಮಡಿಇಲಡ
22 ವಂಗೆ . . . . ವ್ರೊಕ್ಕಂಣ
23 . . ತಂಮಸಾಜಿವ್ರೊ
24 ಸಂಮಂದ
25 ಇಲದಡೆಕುತ್ತಾಲಸೀ
26 ಮೆಕಳಿಯೂರಶ್ರೀ
27 ದೇವಾಲ್ಯಕ್ಕೆ ಸಲುಉದು
28 ಯಿದಂನಾವನೊಬ
29 ನೂಅಳಿದಡೆಗಂಗೆಯ
30 ತಡಿಯಲುಕವಿಲೆ
31 ಯಕೊಂದದ್ರೋಹದಲಿ
32 ಹೋಹನು
(ಮುಂದೆ 3 ಪಙ್ತಿಗಳು ಹೋಗಿವೆ.)

75

ಅದೇ ಹೋಬಳಿ ಮಲ್ಲಿಗೆರೆ ಗ್ರಾಮದ ಬಸವನಗುಡಿಯ ಈಶಾನ್ಯಕ್ಕೆ ಯಿರುವ ವೀರಕಲ್ಲಿನಲ್ಲಿ.

1 ಶ್ರೀಮತುಪ್ರಿಥ್ವೀವ
2 . . . .
3 ನಾರಸಿಂಹದೇವ . . . . ಶಕ . . . . ನಲಸಂವತ್ಸರದ . . . .
4 . . . . ಬುದಂದು . . . . ರಾಯನ

76

ಅದೇ ಹೋಬಳಿ ಹುಲಿವಾನ ಗ್ರಾಮದ ಊರಬಾಗಲಿನ ಪೂರ್ವಕ್ಕೆ ಯಿರುವ ವೀರಕಲ್ಲಿನಲ್ಲಿ.

ಪ್ರಮಾಣ 6′ × 3′.

1 ಶ್ರೀವಿಕಾರಿಸಂವತ್ಸರದವಇಶಾ
2 ಕಸು ೧೦ ಸೋ ॥
3 ಶ್ರೀಮತುವಾಸ
4 ರಾಯರು . . . . ಬಿರುದವಸರಾಕಾ
5 ದಿತನಇರಾಲಿಹತು . . . . ವೀರಗುಡಿ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

77

ಅದೇ ಹೋಬಳಿ ಚಾಮಲಾಪುರ ಗ್ರಾಮದ ಬಸವನಗುಡಿಯ ಪೂರ್ವಕ್ಕೆ.

ಪ್ರಮಾಣ 5′ × 2′.

1 ಸ್ವಸ್ತಿಶ್ರೀವಿಜಯಾಭ್ಯುದಯಸಾಲಿವಾಹನಸ
2 ಕವರುಸಸಾವಿರದವೂನೂಱತೊಂಭತ್ತವೊಂ
3 ಭತ್ತನೆಯ . . . ಸಂವತ್ಸರದಸ್ರಾವಣಶುದ್ಧ ೧
4 ಲುಶ್ರೀವರ್ಱಮಹಾಮಂಡಲೇಶ್ವರಶ್ರೀವಿಕಚಿ
5 ವೊಡೆಯರನಿರೂಪದಿಂತಿಂಮರಸರುಹಾರಿ
6 ನಿದೇವವೊಡೆಯರಿಗೆಕೊಟ್ಟಧರ್ಮ್ಮಸಾದ
7 ನದಕ್ರಮವೆಂತೆಂದರೆನಂಮ್ಮನಗರಿಗೆಸ
8 ಲುಹಆರಸನಕೆಱೆಯಸೀಮೆಯಹುಲಿವನದ
9 ಸ್ಥಳದಲ್ಲಿಹುಲಿವಾನದಲ್ಲಿಪೂರ್ವ್ವದಲಿಂಗಮುದ್ರೆ
10 ಯಕಲ್ಲಿಟ್ಟಸಂಮಂಧಬಡಗಣಕೋಟೆಯಲ್ಲಿವೊಂ
11 ದುಕೆರೆಯನುಆಸ್ಥಳದಲ್ಲಿಲಿಂಗಮುದ್ರೆಯಹೊಲ
12 ಗದ್ದೆಯನುನಿಮಗೆಹಿಂದೆದೇವರಾಯಮಹಾರಾಯ
13 ರುಕೊಟ್ಟಿದ್ದಸಂಮಂದಕ್ಕೆಪೂರ್ವ್ವಸೀಮೆಯನು
14 ಊರ್ಜ್ಜಿತವಮಾಡಿಬಿಟ್ಟುನಾಲುನಿಮಗೆಹು
15 ಲಿವನದಸ್ಥಳದಚಾಮಲಾಪುರವನುನಾಲು
16 ನಿಮಗೆಸುಧರ್ಮ್ಮದಪುರವಾಗೆಕೊಟ್ಟೆವು
17 ಆಪುರಕ್ಕೆಸಲುತಚತುಸೀಮೆದೊ
18 ಳಗಾದಗದ್ದೆಬೆದ್ದಲುಆಣೆಅಚ
19 ಕಟ್ಟುಕಟ್ಟೆಕಾಲುವೆಸರ್ವ್ವಸಾಮ್ಯ
20 ವನುಆನುಬವಿಸಿಕೊಂಡಬಹ
21 ರಿಯೆಂದುಕೊಟ್ಟಧರ್ಮ್ಮಸಾದನಯಿದ
22 ಕ್ಕೆಆವನೊರ್ಬ್ಬತಪ್ಪಿದರುಗಂಗೆಯ
23 ತಡಿಯಲಿಕಪಿಲೆಯಕೊಂದಪಾಪ
24 ಕ್ಕೆಹೋಹರುತಂಮ್ಮತಂದೆತಾಯಿಗೋ
25 ಉಬ್ರಾಂಮ್ಮರವಾರಣಾಸಿಯಲ್ಲಿಕೊಂ
26 ದಪಾಪಕ್ಕೆಹೋಹರುತಂ[ಮ]ಗುರುವಿ
27 ಗೆತಪ್ಪಿದ[ವ]ರುಯೆಂದುಕೊಟ್ಟಧರ್ಮ್ಮಸಾದನ

78

ಕೊತ್ತತ್ತಿ ಹೋಬಳಿ ಬೇಲೂರು ಗ್ರಾಮದ ಕೆರೆ ಯೇರಿಮೇಲೆ ಇರುವ ದುರ್ಗಾದೇವಿಯ ಹಿಂದಿನ ಕಲ್ಲಿನಲ್ಲಿ.

ಹಳಗನ್ನಡಕ್ಷರ.

1 ಸ್ವಸ್ತಿಸಮಸ್ತರಿಪುನೃಪಕುಂಭಿಕುಂಭದಳನಪಂಚಾಸ್ಯ
2 ಸಮುದಿತಶ್ರೀಮ . . . . ಳವಿಮುಕ್ತಚೋಳಭೂಪಾಳ . . . . . .
3 ಳತ . ಜಿತವೀರಲಕ್ಷ್ಮಿಆಶ್ರಿತಭಕ್ತಮಲಾಪಕರ್ಷಣಭೂಮಿಸಂಚರಣ
4 ಜಯಮೂಳಸ್ತಂಭಂಶ್ರೀಮದ . . ಗಂಗಮಣ್ಡಳೇಶ್ವರಪ್ರಭು
5 . . ಪದ್ಮಯುಗ್ಮಾಶೋಕಭೋಗಿಕಾಶ್ರಿತಭ್ರಮದ್ಭ್ರಮರಜಿತರಿಪುಸಂ
6 ಸಿತಸಮರಪ್ರತಾಪ . . ರಾಜ್ಯಭಾರಧುರಂಧರಮಮಾತ್ಯಸ
7 ಮಿತಿವಿರಾಜಮಾನಂಸತ್ಯತ್ವನಾಭಿಕಾನೀನಂಸಮರಜಿತ
8 ಭೂಪಜೀವಪ್ರದನುಂಅತಿಪ್ರತಾಪಚರಣಂರಿಪುಖರಕಿರಣಂ . .
9 ತಿಗಾಂಜನೇಯಂಸೌಚಗಾಂಗೇಯಂಶರಣಾಗತವಜ್ರಪಂಜ
10 ರಂರಿಪುಖಂಜಕುಂಜರಂತಂತ್ರರಕ್ಷಾಮಣಿಮಂತ್ರಿಚಿನ್ತಾ
11 ಮಣಿವಿನಯವಿಳಾಸಂಶ್ರೀಮತ್ಪೆರ್ಗ್ಗಡೆಹಾಸಂವಿಶ್ವ
12 ಬಿಸಹಾಸಪ್ಪರ್ತಿಹಿತಾಭರಣಂ ॥ ಶಕನೃಪಕಾಳಾತೀತಸಂ
13 ವತ್ಸರಶತಂಗಳ್ ೯೪೪ ನೆಯದುರ್ಮ್ಮುಖಿಸಂವತ್ಸರದಫಾಲ್ಗುಣಮಾ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

ಸಸುದ್ಧಪಞ್ಚಮಿಸೋಮವಾರಪುನರ್ವಸುನಕ್ಷತ್ರದನ್ದುಗಂಗಪೆರ್ಮ್ಮಾ
ನಡಿಗಳುಕನ್ನಾಟನಾಳುತ್ತಮಿರೆತಮ್ಮಸ್ವದೊರಾಳದನ್ದುಮೆಂತವರಜ
ನಾಲಯ್ಯಾಗಿಸೆರ್ಮ್ಮಾನಡಿಜೀವಿತಂ . . ದಬಲೋರಕಟ್ಟಲಾಳ್ವಾದಕೆಱೆಯ
ಮೆಟ್ಟುಕಂಬೊಯ್ಸಿಕಟ್ಟೆಯಕಟ್ಟಸಿತೂಬನಿರಸಿಮುನ್ನಂತವ . .
ಕೊಳಗಮಣ್ಣುಬಿಟ್ಟದೊನ್ದ . . . . ಕೆಱೆಗೆ . . . .
ವುಮಂಬಿಟ್ಟಂಇದನಱೆದಕೋಟಕವಿಲೆಯಂಬ್ರಾಹ್ಮಣರುಂಕಾಸಿಯು
ಮನೆಱಿಕ್ಕಿಱಿ . . ಬಹುಭಿರ್ವಸುಧಾಭುಕ್ತಾರಾಜಭಿಃಸಗರಾದಿಭಿಃ । ಯ
ಸ್ಯಯಸ್ಯಯದಾಭೂಮಿಸ್ತಸ್ಯತಸ್ಯತದಾಫಲಂ . . . .
. . . .

79

ದುದ್ದಾ ಹೋಬಳಿ ದೊಡ್ಡಗರುಡನಹಳ್ಳಿ ಗ್ರಾಮದ ಕೆರೆಕಟ್ಟೆಯಕೆಳಗೆ ಶಿಥಿಲವಾಗಿ ಯಿರತಕ್ಕ ಸೋಮೇಶ್ವರ ಗುಡಿಯಲ್ಲಿರುವ ಕಲ್ಲಿನಲ್ಲಿ.

ಸ್ವಸ್ತಿಸಮಸ್ತಭುವನಾಶ್ರಯಶ್ರೀಪ್ರಿಥುವೀವಲ್ಲಭಂಮಹಾರಾಜಾಧಿರಾಜ
. . . . ಗಂಡನಂಮದನ . . . .
ಧ್ಧಿಗಿರಿದುಗ್ಗ್ಗಮಲ್ಲನುಂಚಲದಂಕರಾಮನುಂಪಾಂಡ್ಯ
ರಾಜ್ಯಪ್ರತಿಷ್ಟಾಚಾರಿಯಾಹೊಯಿಸಳಪ್ರತಿಷ್ಟಾಚರ್ಯಶ್ರೀವೀರನಾರಸಿಂಹದೇ
ವನುಪ್ರಿತ್ವಿರಾಜ್ಯಂಗೆಉತ್ತಿದು ॥ ಕಳದಲದನಾಡಆಬಲದಸಂತೆಯಕರ
ದಮಿಂಚಗಉಂಡನಾಪುತ್ರಚೋಳಗಉಂಡಬಯಲಮುತ್ತ್ಗಂಡರಣರಂಗ
ಕೇಸರಿತಪ್ಪತಪ್ಪುವರಗಾಳ್ವದ್ಧಱಿಪ್ಪುವಂಬಂಟಗೊಂತಮುನುಱಾಬೈರ
ಕಂಬೆಯಕಾಡುವಿಟ್ಟಯೋಳಗದಲಿಗೆಲಿದುವ್ಯಿರಿಸಂಹಾರಂಮಾಡಿ
. . ಮಂತರಕದುಂಹಿಡಿದುಗೆಲಿದಡೆಯೆಬಾಗೊಟ್ಟರುಯಿದಸ
. . ರದಶ್ರವಣಭೂಭ್ರಿದರಹಶ್ರೀಮತ್ಪ್ರತಾಪಚಕ್ರವರ್ತ್ತಿಹೊಯ್ಸಳಶ್ರೀ
. . ರ . . . . ವರ್ಸರುಗರುಡಹಳ್ಳಿಯಸಂಕರಗಉಡನಮಾವ
. . . . ಣ್ಯಮಾಡಿಕೊಟ್ಟಜಯಪತ್ರ . . . .
. . . . ಹಳ್ಳಿಯಸೀಮಾವಿವಾದಕ್ಕೆಆ . . . .
. . . . ರುಡನಹಳ್ಳಿಯತಾಂಬ್ರಸಾಸನ . . . .
ದುಗುದುರವರಾಕಿಲಜಕಾಲದಿಂದಪು . . . . ವ್ಮಬಡಂಬಡಿಂಯಿಲ್ಲೆಂದುಬ
ಲೋತ್ಕರದಿಂದಕಲನಟ್ಟರೆಂದುಆಮುರುಡಿಪುರವರುಮುಂದಿಗೆಯನಿ
ಕ್ಕಿದಡೆಗರುಡನಹಳ್ಳಿಯಕಂನ್ನೆಯನುಯಿಕ್ಕೆದಬಡಂಬಡಿಕೆಯಬಱಿ
ಗವಿನಡಿಸಿದರಪ್ಪಸಲದುನನುಬಲೋತ್ಕರದಿಂ . . . . ದಲ್ಲಿಯನಟ್ಟಕಲ್ಲಮು
ರಿಯದಿಎಂನಭೂಮಿಎಂದುಆಮುದಿರಿಯನೆತ್ತಿತದನಾಸಿರಃಪತ್ರವಬ
ರಸಿಶ್ರೀಮದ್ರಾಜಧಾನಿದೊರಸಮುದ್ರದಶ್ರೀಹೊಯ್ಸಳೇಸ್ವರಸಂನಿಧಿಯ
ಲಿಆಸಂವತ್ಸರದಶ್ರಾವಣಬ ೩ ಆದಿನಆಕಂನೆಯನುದ್ದಿವಹಿಡಿದುಗೆ
ದ್ದನುಅದುಕಾರಣಆಭಟಗವೆಯವರುನಟ್ಟಕಲ್ಲುಮೇರೆಯಾಗಿಆನಾಯಿಗರು
ಡನಹಳ್ಳಿಗೆಸಲುದೆಂದುಶ್ರೀವೀರನಾರಸಿಂಗದೇವರ್ಸರುಗರುಡನಹಳ್ಳಿ . . . . . .
ಸರನಗರುಡನಹಳ್ಳಿಯಉರುಕುಪಯಲಿಬೆದ್ದಲು ೪೦೦ ದೊಡೇರಿಯ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

25 ..ಗದ್ದೆಸ ೧ ಚಿಕ್ಕಗರುಡನಹಳ್ಳಿಯಕೆಱೆಯಲುಸ ೧ ಅಂತುಸ ೪ ನುಶ್ರೀವೀರನಾ
26 ರಸಿಂಗದೇವರಸರುಆಕಂನಯ್ಯಂಗೆದಿಬ್ಯವತುಡಿಕೆಗೆದ್ದಲಿರೆಕಾರುಣವು
27 ..ಕೊಟ್ಟಕೊಡೆಗೆವ್ರೊಲಕರದರರೊಲದವೂರದೇವನವುಕ್ಕಳುಬಸದಿ..
28 ....ಮಾಡಿಲಕಂನಯಂಗೆಕೊಟ್ಟಕೊಡಿಗಿಶ್ರೀಮಲಪರಳುಗಂಡು
29 ಶ್ರೀಕೊಂಡೀಸ್ವರಶ್ರೀವೀರಸೋಮನಾತ ಸೋಮನಾತ ಶ್ರೀವಿಶ್ವನಾತ

80

ಅದೇ ಗ್ರಾಮದ ಬೋರೇದೇವರಗುಡಿಯ ಪಶ್ಚಿಮಕ್ಕೆ ಇರುವ ವೀರಕಲ್ಲಿನಲ್ಲಿ.

1 ಶ್ರಿಪ್ರ....ಸಲುಲಚಕ್ರವರ್ತಿಶೊತಿಶ್ರೀಸಮಸ್ತಪ್ರಶಸ್ತಿಸಹಿ
2 ......ತಮರುರಾಜರಾಚಮಲ್ಲಪರಸಗಂಡಕದನಪ್ರಚಂ(ಡ)ಗಿರಿದು
3 ....ಲ್ಲಪಸಿಮರಸನ್ನರಾಯವೇಂಗರಾಚಗಂಡಭೇರುಂಡಚೋಳು
4 ರಾಯ....ಪನಾಚಾರಿಯಪಾಂಡ್ಯರಾಯಪ್ರತಿಷ್ಟಾಚಾರಿಯ
5 ....ಮಕರರಾಯ......ಹೊಯಿಸಳಪ್ರತಾಪಚಕ
6 ಕ್ರವರ್ತ್ತಿಶ್ರೀವೀರ........ರಾಜ್ಯಂ..........ಗರು
7 ಡನಹಳ್ಳಿ........

(ಉಳಿದಭಾಗ ಭೂಮಿಯಲ್ಲಿರುತ್ತೆ.)

81

ಅದೇ ಹೋಬಳಿ ಬೀಚೇನಹಳ್ಳಿ ಗ್ರಾಮದ ಬೋರೇಗುಡಿಯ ಮುಂದಿನಕಲ್ಲಿನಲ್ಲಿ.

ಪ್ರಮಾಣ 4′ 6″ × 1′ 6″.

1 ಪರಾಭವಸಂವತ್ಸರ
2 ವೈಶಾಕಬ೧ಲು ಶ್ರೀ
3 ಮತು......ರದ
4 ಅನದೆಯ......
5 ..ರಾಗಣಾಚಾರಿವೀರಪ್ಪ
6 ವಡೆಯರುದುದ್ದಿನ
7 ರುವರಬಟ್ಟವೂಂನ್ಯ
8 ದಾನಾಬಾದ....ಯರ
9 ..ಗೆಕೊಟ.....

(ಇನ್ನು ೬ ಪಙ್ತಿ ಚನ್ನಾಗಿ ಕಾಣುವದಿಲ್ಲ.)

82

ಅದೇ ಗ್ರಾಮದ ಮಾರೀಗುಡಿಯ ಮುಂದಿನಕಲ್ಲಿನಲ್ಲಿ.

ಪ್ರಮಾಣ 4′ 6″ × 1′ 6″.

1 ಪಾಥಿವಸಂ
2 ವತ್ಸರದಫಾ
3 ಲ್ಗುಣಶುದ್ಧ೫ಲು
4 ರಾಮಚಂದ್ರಹೆಬ್ಬಾರ
5 ವೆರುದುದ್ದನನಂಜಪ
6 ರುವರುತುರುದೇವೆರುಮುವ
7 ರುವಿಕಸ್ತರವಾಗಿದುದ್ದಿನಕೆಱೆ
8 ಗೆಮೂಱುಭಂಡಿಗೆಬೀಜ
9 ಹಳ್ಳಿಯನುನಾಲುಕೊಟಿ
10 ಉಯಿದನುಆಕೆಬಾರು
11 ಯಿಧಮ್ಮಕ್ಕೆಅಳುಪಿದ
12 ವರುತಂಮತಂದೆತಾಯಿ
13 ಯವಾರಣಾಸಿಯಲ್ಲಿ
14 ಕೊಂದಪಾಪಕೆಹೊಹರು
15 ಯಿಾದಮ್ಮಕ್ಕೆಅಳುಪಿದವರು

(ಉಳಿದಭಾಗೆ ಭೂಮಿಯಲ್ಲಿರುತ್ತೆ.)

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

83

ಅದೇ ಹೋಬಳಿ ಮರಡಿಪುರಗ್ರಾಮದ ಹಳೇಯೂರಿನ ಪ್ರದೇಶದಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′ 6″.

1 ಶ್ರೀನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭ . .
2 ಸ್ತಂಭಾಯಶಂಭವೇ ‖ ಸ್ವಸ್ತಿಶ್ರೀಮನ್ನಮಹಾಮಹಿಮನಪ್ಪಶ್ರೀಕವಿಳಾಸದುತ್ತರ
3 ರಾಧೀಶ್ವರಂಶ್ರೀಪಾರ್ವ್ವತೀವಲ್ಲಭಂಪಾರ್ವ್ವತೀಮನೋನಯನಪ್ರಾಣೇಸ್ವರ . . . . . .
4 ಚಕಳಸಕುಂಕುಮಪಂಕಾಂಗಿತಸಧಿರವಕ್ಷಸ್ಥಳಪಾರ್ವ್ವತೀಮನಸ್ಸರೋವರಕಾ . . . .
5 ಶಪಾರ್ವ್ವತೀಪ್ರಾಣನಾಥಭಸ್ಮೋಧ್ಧೂಳಿತಸುದ್ಧಗಾತ್ರಕಟ್ವಾಂಗದಾರಿತ್ರಿಸೂಳಧರಗಂಗಾ
6 ಧರಜಾಹ್ನವೀಜಟಾಜೂಟಕೋಟೀರಭಾರಪಂಚವಕ್ತ್ರಪರಮೇಸ್ವರತ್ರಿಯಂಬಕತ್ರಿಲೋಚನತ್ರಿ
7 ಸೂಳಧರಕಟ್ವಾಂಗಧಾರಿಕಪಾಳರಕಜಿಕೊರಳಹೆಜಿನೊಸಲತುಜಿಗಿದಕೆಂಜೆಡೆಯ
8 ನವಿಲೆಯಜೆಡೆಯಶಂಕರದೇವರಪಡಿಹಾಜಿದಾಸಯ್ಯಸದ್ಯೋಜಾತನಮನಮೂರ್ತಿಭಕ್ತಜ
9 ನವನವರ್ತಿಹಿರಿವಿರಿಂಚಿಗಳಕುಲಸ್ವಾಮಿತೇತ್ರಿಂಸಾದಿಕೋಟಿದೇವರ್ಕ್ಕಳುಪ್ರೂಜಿತಸಕಳದ
10 ನಿಸ್ತಾರಕಅಂಧಕಾಸುರಮದಭಂಜನಲಾಳಾಸುರಕೋಳಾಹಳತ್ರಿಪುರಸಂಹರಿಶೈತಮೂರ್ತಿ
11 ಸು . ಪ್ರಾಣಪ್ರದವಿರಿಂಚಿಪಂಚಮಸಿರಛ್ಛೇದನನಾರಾಯಣನೇತ್ರಾಂಬೋಜಪೂಜಿತಪಗದ್ವ
12 ಯಬಾಣಬಾಣಾಸುರಬಾಹುಪ್ರ . ಮದನಸಂಹಾರಿನಾರದಾದಿಮುನಿಗಣಮನೋನಾಯಕಉಚ್ಚ
13 ಶಿತೇಮಂತ್ರಉದ್ಧರಿಸಿತೇತಂತ್ರಸಿವಾಚಾರವೇಪಥವಾಗಿನಡಪರಿಷಿಂಗಣಂಗಳುಪ್ರಿಯದಕ್ಷಯ . . . .
14 ನಾಸನಬಾಗಾಕ್ಷಹರಅಕ್ಷೇಶ್ವರನಂದಿನಾಥನಂದಿಮಹಾಕಾಳವೀರಭದ್ರಬ್ರಿಂಗಿನಾಥಅಂಗಜಅ . . . .
15 ತಗ್ರೀವಮಯಗ್ರೀವಘಂಟಾಕರ್ಣ್ನಅಗ್ಗಳಗಣ್ನಧಾರುಕರೇಣುಕಸಾರೂಪ್ಯಶಾಯುಜ್ಯಸಾ
16 ಮ್ನಾಜ್ಯಪದವಿಯಂಹಡದಗಂಗಾವಾಳುಕಸಮಾರುದ್ರರುಸಕಳಗಣಪರಿವೇ
17 ಷ್ಟಿತಯೆಕ್ಕೊಟಿಗಳುಪೂಜಿತಮತ್ತಂಮಾರ್ತ್ಯಲೋಕದಗಣಂಗಪಸ್ರಿಯಾಳುವದಾಸದಸವ
18 ರ್ಮ್ಮದಿಹಿಲಉದ್ಭಟನಂಬಿಕುಂಬಾಜಿಗುಂಡಆಂಡವಲಕರಿಕಾಲಚೋಳಭೋಗದೇವಬಾಣವ
19 ಯೂರಕಾಳಿದಾಸಕೇಶಿರಾಜದಣ್ನಾಯಕಸುರಿಗೆಯಚಲ್ವಡರಾಯಸಂಗನಬಸವಯ್ಯಲಿನಿಮಿತಿ
20 ಕೇಸವರಾಜಜಗದೆವದಣ್ನಾಯಕಏಕಾನ್ತದರಾಮಯ್ಯಸೊನಲಿಗೆಯರಾಮಯ್ಯಹುಲಿಗೆಜಿಯಪೊ
21 ನ್ನಯನೆಲುವಿಗೆಯಸಾಂತಯ್ಯಸಕಳಗಣಪರಿವೇಷ್ಟಿತಶ್ರೀಕಲಿದೇವರಪ್ರಸಸ್ತಿಮಂಗಳಂ ‖
22 ಸ್ವಸ್ತಿಶ್ರೀಮನ್ತಮಹಾಮಣ್ಡಳೇಶ್ವರಂತಳಕಾಕಾಡಗಂಗವಾಡಿನೊಣಂಬವಾಡಿಬನವಸೆಹಾನುಂಗಲು
23 ವುಚ್ಚಂಗಿಕೊಂಗುಂನಂಗಲಿಗೊಂಡಭುಜಬಲವೀರಗಂಗನಸಹಾಯಸೂರಸನಿವಾರಸಿದ್ಧಿಗಿರಿದು
24 ಗ್ಗಮಲ್ಲಚಲದಂಕರಾಮನಿಶ್ಶಂಕಪ್ರತಾಪಹೊಯಿಸಣವೀರಬಲ್ಲಳದೇವದೊರಸಮುದ್ರ . . . .
25 ದನೆಲೆವೀಡಿನಲುಸುಖಸಂಖಥಾವಿನೋದದಿಂರಾವಿನೋಹಿರಾಜ್ಯಂಗೆಯ್ಯುತ್ತಮಿರೆತಪ್ಪಾದಪದ್ಮೋ
26 ಪಜೀವಿತನುಮಪ್ಪಶ್ರೀಮನ್ನುಮಹಾಶಾಮಂನ್ತಭಾಸೆಗೆತಪ್ಪುವಲೆಂಕರಗಂಡಹುಲಿಯಜ್ಯ
27 ಗುಳೆಯಮೊತ್ತದಸೇನಾನಾಯಕಂಶ್ರೀಕಲಿದೇವರದಿವ್ಯಶ್ರೀಪಾದಪದ್ಮಂಗಳಂಕಮಳಿನಾಳ . .
28 ಶೂತ್ರದಂನ್ತೆಡೆವಜಿಯದೆಅನುದಿನಂಪಸಕೆಯ್ಯುತ್ತಬಿಪ್ಪನಾಗಯ್ಯವೀರಬಮ್ಮಯ್ಯನಮಗಭಕ್ತರ
29 ಕರುನಾಳಕಾರುಣ್ಯದಮರಶರಣರದಾಸಶೋವನಸಿಂಗನಮಾರೆಯನಾಯಕತಂಮ್ಮಬಲ್ಲ
30 ಯ್ಯಮಗಶಾಂತಯ್ಯಕೆಜಿಗೊಡಿನಾಡಹಾಡಿಮಂಡಲವಿರ್ತಿಯಮಂಡಲಹೊಯಿಸಣಗವುಡಕೆಬ್ಬೆಹಳ್ಳಿ
31 ಯಗಂಗಗವುಡಪೇವುಕಲ್ಲಚವುಡಗವುಡಕನ್ನಯ್ಯನಹಟ್ಟಿಯನಚೊಕೆಯನಾಯಕನೊ
32 ಳಗಾದಸಮಸ್ತಗಾವುಂಡುಗಳುವಿದುಸಕವರಿಶ್ಸದ ೧೧೦೭ನೆಯ ವಿಶ್ವಾವಸುಸಂವತ್ಸರದಪುಶ್ಯಸು ೭ ಸೋಯೆಮ್ಮಯಕೇತನಹಳ್ಳಿಯ
33 ಶ್ರೀಕಲಿದೇವರಿಗೆಶಿವಪುರವಾಗಿಭಕ್ತರಿಗೆಕೊಟ್ಟಧರ್ಮ್ಮಆಟಕೇಶ್ವರದೇವರತೊತ್ತುವೀರಬಮ್ಮಯ್ಯ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

34 ಚೊಡಮದೇವರಅಂಕಯ್ಯಮಲ್ಲಿನಾಥದೇವರಜಕ್ಕಯ್ಯಸೋಮನಾಥದೇವರಕೇತಯ್ಯಅಪ್ಪ
35 ಯ್ಯಮಲ್ಲಿನಾಥದೇವರಯೆಚಯ್ಯರಾಮನಾಥದೇವರಹೊಯಶಣದಾಚಿಕೂಡಮದೇವರಮಾ
36 ಚಯ್ಯಅಂಕನಾಥದೇವರಹೊಂನಯ್ಯಚೊಡಮದೇವರಎಂಕಬೂವಣ್ಣ ಯಿನ್ತಿನಿಬರಿಗೂಧಾರಾಪೂರ್ವ್ವ
37 ಕಂಮಾಡಿಕೊಟ್ಟಧರ್ಮ್ಮವಂಚಂದ್ರಾರ್ಕ್ಕತಾರಂಬರಂಸಲುವುದುಯಿಧರ್ಮ್ಮಕೆಅನುಕೂಲನಾದ
38 ವನುಸಿವಲೋಕಪ್ರಾಪ್ತನಪ್ಪನುಯಿಧರ್ಮ್ಮಕೆಯನ್ಯಾಯನಬೀಲಿಸಿದವನುಗಂಗೆಯತಡಿಯಲುಸಾವಿರಬ್ರಾಹ್ಮಣ
39 ಸಾವಿರಕವಿಲೆಯಕೊಂದಬ್ರಂಹ್ಮತಿಯಲಿಹೊಹ ॥ ಶ್ವದತ್ತಂಪರದತ್ತಂವಾಯೋಹರೇತಿವಸುಂಧರಾಂಷ
40 ಷ್ಟಿರ್ವರ್ಷಸಹಸ್ರಾಣಿವಿಶ್ಟಾಯಾಂಜಾಯತೇಕ್ರಿಮಿಃ ॥ ಶ್ರೀಜೆಡೆಯಸಂಕರದೇವರಮಲ್ಲಯ್ಯಬರದಶಿವದೇವ ॥
41 ಮಂಗಳಮಹಾಶ್ರೀ ॥

84

ಅದೇ ಹೋಬಳಿ ದುದ್ದದಲ್ಲಿರುವ ನರಸಿಂಹದೇವರ ಇನಾಂ ಭೂಮಿಯಲ್ಲಿ ಇರುವ ಕಲ್ಲಿನಲ್ಲಿ.

ಪ್ರಮಾಣ 3′ × 2′.

1 ಆಬಸಮುದ್ರದನಿ
2 ಯಕೆಳೆದಿಯರಟ್ಟೆ
3 ಕೋಟೆನರಸಿಂಹದೇವರಿಗೆ
4 ಲಕ್ಷ್ಮೀನರಸಿಂಹದೇವರಿಗೆ

(ಇನ್ನು ೨ ಪಙ್ತಿ ಸವೆದುಹೋಗಿವೆ.)

85

ಅದೇ ಹೋಬಳಿ ಚೋಕನಹಳ್ಳಿಗೆ ಸೇರಿದ ಹಂಪಾಪುರದ ಬಸವನ ಗುಡಿಯ ಉತ್ತರಕ್ಕೆ ವೀರಕಲ್ಲಿನಲ್ಲಿ.

ಪ್ರಮಾಣ 5′ × 4′.

1 ಶ್ರೀಗುರುಭ್ಯೋನಮಃ ॥ ವಿಷುಶಂವತ್ಸರದಮಾರ್ಗ್ಗಸಿರಸುದ್ಧ ೧೫ಬು । ಸ್ವಸ್ತಿಶಮಸ್ತಪ್ರಶಸ್ತಶಹಿತಂ
2 ಶ್ರೀಮತುಪ್ರತಾಪಚಕ್ರವರ್ತ್ತಿಹೊಯಿಸಳಭುಜಬಲಬಲ್ಲಾಳದೇವಪ್ರಿತ್ವಿರಾಜ್ಯಂಗೆವುತ್ತಯಿರಲು
3 ಬಸುರುವಾಳು ಕೆಱೆಗೋಡುಕಾದುವಲ್ಲಿಬಸರಿವಾಳವುರುಳಿಯಕಿಱೆಯಗುದಿಯರಕುಲದಕರೆಗೌಡನಮಗರಂಗಗೌಡನುಕಾದಿಬಂ ದಲ್ಲಿಆತ . . ಂವಡೆಯರು
4 ಯಿಗವುಡಮುಂಡಗವುಡನುತಂಮ್ಮಅಂಣ್ಣರಂಗಗವುಡನಬೀರಗಲನುಯೆತ್ತಿಸಿದರುಮಾಡಿದಆಚಾರಿಅಳಿಬನೂಆಲಿಂದಂಯಿಲಿರಂಗಗ ವುಡನಮಗ
5 ಚಿಕ್ಕಗವುಡನುಕಲ್ಲದೂಮರಅಳಿದಬಳಿಕಮರಳಿಸುಭಕ್ರಿತುಶಂವತ್ಸದಜೇಷ್ಟಸುದ್ಧ ೧೫ ಬೆಲೆಗಟಹೊನ್ನನುಕೊಟ್ಟುದೂ . ರವ ನುತಿದ್ದಿಸಿವೋಲು
6 ಮಚುಳಿನುಮುಚಿಸಿದನುಯಿಧರ್ಮ್ಮವನುತಂಮಾಅಂಣಂದಿರನುಕೇಕೊಂಡುಮಾಡಿಸಿದನುಯಿಧರ್ಮ್ಮವನುಕೆಡಿಸಿದವಂಗೆಅ
7 ಗೋರನರಕಅಗವುಡಗಳಬಪ್ಪಶ್ರೀವಿಸ್ವೇಸರಶ್ರೀವಿಸ್ವೇಷರಶ್ರೀಕಂಬೇಸ್ವರಶ್ರೀಮಲ್ಲಿಕಾರ್ಜುನದೇವರುಮತ್ತಿ ಮಾಡಿದಆಚಾರಿಅ
8 ಕಸಲೆಬಂದಿಯೋಜನಮಗನುಮಾಮರಿಯಂಚಿತಂಮನೂಆತನಬಪ್ಪಶ್ರೀಮಲ್ಲಿಕಾರ್ಜುನಅಳಿಬರಿದಿದಲಿಗ ೬ಮಂಚೋನುತಿದ್ದಿದಲಿಗ
9 ೬ ಅನ್ತುಗ ೧೨॥

86

ಮುತ್ತೆಗೆರೆ ಗ್ರಾಮದ ಹುಚ್ಚೇಗೌಡನಲ್ಲಿರುವ ತಾಮ್ರಶಾಸನ.

೧ ಪತ್ರ.—ತೆಲುಗುಭಾಷೆ.

ಶ್ರೀಮತೇ ರಾಮಾನುಜಯೇನಮಃ.

1 ಸ್ವಸ್ತಿಶ್ರೀವಿಜಯಾಭ್ಯುದಯರಾಶ್ಯಾಲಿನಾಹನಶಖವರುಷಾಂ
2 ಬೊಲ್ಲು ೧೫೫೫ನೆಯೆಶ್ರೀಮುಖನಾಮಸಂವತ್ಸರಂಆಷಾಡಶು೫ವರುಕಾಶ್ರೀ
3 ಮದ್ರಾಜಾದಿರಾಜಪರಮೇಶ್ವಾರವೀರಪ್ರಾತಾಪಶ್ರೀವೀರರಾಮದೇವಮಹಾ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

[4]ರ್‍ರಾಯಾಲ್ರೈಯನವಾರ್‍ರೂಪೆನಗೊಂಡರ್ರತ್ನಾಶಿಹ್ವಾಸನಾರ್‍ರೂಢಲ್ಯೈನಪೃಥ್ವಿಸಾಂಬ್ರಾಜ್ಯಂ
[5]ವಿಜೆಯಿಱಚುಂಡುಗಾನ್ಯುವಿಷ್ಣುವರ್ದನಗೋತ್ರೊಲ್ರೈನಶ್ರೀಮದ್ರಾಜಾದಿರ್‍ರಾಜರಾ
[6]ಜೇಶ್ರೀರಾಣಾಪೆದ್ದಜಗದೇವರಾಯಾಲ್ರೈಯಾಂಗಾರ್ರುಮಅಮರಾನಿಕಿಪಾಲಿಂ
[7]ಚ್ಚಿಯಿಚ್ಚಿನಹೈಸಲನಾಡುನಾಗಮಂಗಲಂಸ್ತಳನಿಕಿಚೆರ್ರಿನಮುತ್ತೆಗೆರ್‍ರಾಗ್ರಾಮಂ
[8]ಶಿವಾಚಾರಂದೆಲೆಗೌಡುಜೆಂನಿಗೆಕುರ್ರುಬೂಲಾಡುನಳಮಾರುಡುಹೂಚ್ಚಮಾರ್‍ರೂ
[9]ಡುನಿಕಿಸಹವ್ರಾಶಿಯಿಚ್ಚಿನಜಯರೆರ್ಬಯೋಮಂಟೆಯಿಗ್ರಾಮನಿಕಿಪಡವುಟಾ
[10]ತ್ತೊಳಶಿಕಟಬೂಮ್ಮಿಲ್ರೈನಮಿಾರ್ರುರ್ರೊಪಮುಲ್ಲೊ ಮೇಶಿಕೊನಿಇಗ್ರಾಮಂಮ್ಮೊ
[11]ತಾಕಚೆಟುಲ್ಲೂ ನರಕೀಇಗ್ರಾಮಂಕಟಂದಾಕೊಟಮಾವೇಶಿನವಲ್ಲ ಮಾಕುಯಿಚಿನಮೊಂವ್ಯಂಬೂ
[12]ಮ್ಮಿತ್ತೊಳಶಿಕಟಬೂಮ್ಮಲ್ರೋನ ಖ೧ಲ್ ೧॥೧ ವಕ್ಕು ಮಾನಿಕೆಇಗ್ರಾಮಾನಿಕಿತು
[13]ರ್ರುಮಖಂ ||| ೦ | ವಕಬಲ್ಲಬೂಮ್ಮಅನ್ಮೊಬವಿಂಚಿಕೊನಿಗ್ರಾಮುಗಲುಡಿಕೆರ್ರೆಂ
[14]ಡುಪಾಳ್ಳುಮ್ಮಿದಪುತ್ರಪ್ಪವಿತ್ರುಲೂವರಕುಆನ್ಯೂಬವಿಂಚ್ಚುಕೊನಿವಚ್ಚಿದಿಆ
[15]ನಿವ್ರಾಯಿಂಚಿಯಿಚ್ಚಿನಜಯರ್ರೇಖ ॥ ಶ್ರೀ ॥ ಶ್ರೀ ॥ ಶ್ರೀ

87

ಅದೇ ಹೋಬಳಿ ಬೇವುಕಲ್ ಹಟ್ಣಗ್ರಾಮದ ಸಿದ್ದರಾಮೇಗೌಡನ ಮನೆಯ ಹೊರಗೋಡೆಯ ಕೆಳಗಿನ ಕಲ್ಲಿನಲ್ಲಿ.

ಪ್ರಮಾಣ 3′ 6″ × 1′6″.

[1]ಪರಿಧಾವಿಸಂವತ್ಸರದ
[2]ಶ್ರಾವಣಸು
[3]ದಂ. . . . .
[4] . . . .ಲಕ್ಷ್ಮಿನರಸಿಂದ
[5] . . . .ದುದ್ದಗ್ರಾಮದ
[6]ಅಷೇಶಮಹಾಜನಂಗಳು
[7]ಹಟ್ಟಣದಕೆಱೆಮಹಾಜ
[8]ನಂಗಳುಪಟ್ಟಹಳ್ಳಿ
[9]ಸೋವಿಸೆಟ್ಟಿಗೆಕೊಡಿ
[10]ಱಗಾಗಿಕೈಸಾನನ
[11]ದಕ್ರಮವೆಂತೆಂದಡೆ
[12]ಆಹಟ್ಟಣದದೂ

(ಇನ್ನು 2 ಪಙ್ತಿಗಳು ಕಾಣುವದಿಲ್ಲ.)

88

ಅದೇ ಗ್ರಾಮದ ಊರಬಾಗಲ ಬಳಿಇರುವ ಕಲ್ಲಿನ ಕೊನೆಯಲ್ಲಿ.

ಪ್ರಮಾಣ 4′ × 5″.

[1]ಶ್ರೀಮತು
[2]ನಂದಿಯಾ
[3]ಲತಂಮೆದೇ
[4]ವಮಹಾ
[5]ಅರಸು
[6]ದುದ್ದನಂ
[7]ಜಮೊಡಿ
[8]ರಿಗೆಹಟ್ಟ
[9]ಣಗ್ರಾಮ
[10]ಉಂಡುದಾ
[11]ಗಿಕೊಟಲು
[12]ಶ್ರೀನರಸಿಂ
[13]ಹ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

89

ಯೆಲಿಯೂರು ಹೋಬಳಿ ಗಾಣದಾಳು ಗ್ರಾಮದ ಬೋರೇದೇವರ ಗುಡಿಯ ಪೂರ್ವ್ವಕ್ಕೆಯಿರುವ ಕಲ್ಲಿನಲ್ಲಿ.

ಪ್ರಮಾಣ 6′ 4″ × 3′ 6″.

[1]ನಮಸ್ತುಂಗ ರಶ್ಚುಂಬಿಚಂದ್ರಚಾಮರ	..........ಷ್ಣುವರ್ದ್ಧನದೇವರು
[2]ಚಾರವೆತ್ರೈಲೋಕ್ಯನಗರಾರಂಭ	....
[3]ಮೂಲಸ್ತಂಭಾಯಶಂಭವೇ....	ದ್ರದನೆಲೆವೀಡಿನೊಳ್ ....

(ಅಕ್ಷರವೆಲ್ಲ ಸವೆದುಹೋಗಿವೆ.)

90

ಅದೇ ಹೋಬಳಿ ಹೊಳಲು ಗ್ರಾಮದ ತಾಂಡವೇಶ್ವರದೇವಸ್ಥಾನದ ಅಡಿಗೆಮನೆಯ ಮೇಲ್ಛಾವಣಿಗೆಕಟ್ಟಿರುವಕಲ್ಲಿನಲ್ಲಿ.

[1]ಶ್ರೀಮಂಮಹಾಮಂಡಳೇಶ್ವರಂಅರಿರಾಯವಿಬಾಡಭಾ	[4]..ಣಾವೊಡೆಯರುಬಯಿಚಿಯದಂಣಾಯಕರು
[2]ಶೆಗೆತಪ್ಪುವರಾಯರೆಗಂಡಚತುಸ್ಸಮುದ್ರಾದಿಪತಿಯಿಂ	[5]..ವಾಗಿಯಕೊಂಡಹೊಳಲಿಯಬಲಿಯಕೆಚಿ ..
[3]ದುರಾಯಸುರತ್ರಾಣಶ್ರೀಬುಕ್ಕಂಣಾವೊಡೆಯರು ..	

(ಇನ್ನು 6 ಪಙ್ತಿಗಳಿವೆ, ಹೊಗೆಯ ಕಪ್ಪಿಂದ ಕಾಣುವದಿಲ್ಲ.)

91

ಅದೇ ಹೋಬಳಿ ಯೆಲಿಯೂರು ಗ್ರಾಮದ ಕುರೀ ಕೆಂಪನಲಿಂಗೇಗೌಡನ ಹೊಲದಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 1′ × 1′ 3″.

[1]ಹೇವಿಳಂಬಿಸಂವತ್ಸರದವೆಯಿ	[5]ತಯಿರಲಾಗಿದೇವರಸಗಉಡನು
[2]ಸಾಕಬ ೫ ಪೆಂಮಣಗಉಡನಮ	[6]ಕಡದುಕೊಂಡುರಂಗೆಯಗಾ
[3]ಗದೇವರಸಗಉಡನುತಂಮತಾಯಿಮ	[7]ರುಮಗನಿಗೆತಂಮಕೋಟೆ
[4]ಯೆಲಾಗಿತಂಮತಂಗೆದೊಂದಗೆಹೋಗು	[8]ಯಹೊಲದವೊಳಗರ

92

ಅದೇ ಹೋಬಳಿ ಹೊಳಲುಗ್ರಾಮದ ಹೊಲೆಯರ ಇನಾಮತೀ ಹೊಲದಲ್ಲಿರುವ ವೀರಕಲ್ಲಿನಲ್ಲಿ.

[1]ಸರುವದಾರಿವರುಶಕಾರ್ತ್ತಿಕಬ ೧ ಯಲು

(ಮಿಕ್ಕಾದ್ದು ಕಾಣುವದಿಲ್ಲ.)

93

ಅದೇ ಗ್ರಾಮದ ಊರಬಾಗಲಿನ ಕಂಬದಲ್ಲಿ.

[1]ಕೋಟೆವೀಧಿಗೆಯೆಡದಅಳಿವೆ

[2]ಳೆಇಬರೆಯಶುಭಮಸ್ತು

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

94

ಅದೇ ಊರಬಾಗಲಿನಲ್ಲಿ ಹೂತಿರುವ ಕಲ್ಲಿನಲ್ಲಿ.

ಪ್ರಮಾಣ 4′ × 3′.

[1]ಶ್ರೀಹೊರಳುಗ್ರಾ
[2]ಮದಲಿಸು . .
[3]ಯಜಿಕೊಂಡ . . . . ಜ
[4]ಇಂದ . . . . ಸರ್ವಮಾನ್ಯ
[5]ಶಾಸನದ

95

ಅದೇ ಹೋಬಳಿ ಯಲೆಚಾಕನಹಳ್ಳಿ ಗ್ರಾಮದ ರುದ್ರದೇವರ ಗುಡಿಯ ಬಾಗಲಿನ ಚವುಕಟ್ಟಿನ ಸುತ್ತಲಿರುವದು.

[1]ಶ್ರೀಮಹಿಶೂರನಗರದಲ್ಲು ದಿವ್ಯರತ್ನ ಸಿಂಹಾಸನಾರೂಢರಾಗಿಪೃಥ್ವೀಸಾಂಮ್ರಾಜ್ಯವಂಗೈಯುತ್ತಿರಿರುವ ಆಳಿದಮಹಾಸ್ವಾಮಿಶ್ರೀ ಕೃಷ್ಣರಾಜವಡೆಯರವರಸಂಸ್ಥಾನದಲ್ಲಿಪಾರಂಪರೆಯಾಗಿ ಪ್ರಿಯಸೇವಕರಾದಅರಮನೆವಳಬಾಗಿಲಗುರಿಕಾರ್ರುಚೆಂನ ವೀರಪ್ಪನವರಪೌತ್ರರಾದಮರಿಚಂನವೀರಪ್ಪನವರಪುತ್ರರಾದಅರಮನೆ
[2]ವಳಬಾಗಿಲಗುರಿಕಾರ್ರುಚಂನಪ್ಪನವರುಸ್ವಸ್ತಿಶ್ರೀವಿಜಯಾಭ್ಯುದಯಶಾಲೀವಾಹನಶಕವರ್ಷಂಗಳು ೧೬೮೭ ಸಂದವರ್ತಮಾನವಾದಪಾರ್ಥಿವನಾಮಸಂವತ್ಸರದಕಾರ್ತೀಕಶುದ್ಧ ಪಂಚಮಿಮಂಗಳವಾರದಲ್ಲುಮಾಡಿಿದಯಲೇಚಕ್ಕನಹಳ್ಳಿ ಶ್ರೀವೀರಭದ್ರಸ್ವಾಮಿಯವರದೇವಸ್ಥಾನದಜೀರ್ನೋದ್ಧಾರದಸೇವೇ ॥

96—97

ಕೊತ್ತತ್ತಿ ಹೋಬಳಿ ಗುತ್ತಲ್ ಗ್ರಾಮಕ್ಕೆ ಸೇರಿದ ಚಂನಪ್ಪನದೊಡ್ಡಿ ಹೊಂಬಾಲಮ್ಮದೇವರ ಮನೆಯಲ್ಲಿ ಯಿರುವ ಯರಡು ಕಲ್ಲುಗಳಲ್ಲಿ.

ಗ್ರಂಥ ಮತ್ತು ಅರವಕ್ಷರ.

98

ಅದೇ ಹೋಬಳಿ ಸುಂದಹಳ್ಳೀ ಗ್ರಾಮದ ವೂರಬಾಗಲಲ್ಲಿ ಇರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 1′ 3″.

[1]ಯಿಗ್ರಾಮಸುಂದೆ
[2]ಹಳ್ಳಿಯಗ್ರ . . . .
[3] . . . . . . ಯಿಂಡ
[4]ವಾಲಗ್ರಾಮ . . ೦ನು
[5]ಮದೂರಶ್ರೀರಾಮಚಕ
[6]ಂದ್ರದೇವರಿಗೆಸುಂಕಸಹ
[7] . . . . ಸಲುವುದು
[8]ಶ್ರೀರಾಮಚಂ
[9]ದ್ರದೇವರೂ

99

ಅದೇ ಹೋಬಳಿ ಗುತ್ತಲ್ ಗ್ರಾಮದ ವೂರಬಾಗಲಮುಂದೆ ಪೂರ್ವಕ್ಕೆ ಇರುವ ಕಲ್ಲಿನಲ್ಲಿ.

ಪ್ರಮಾಣ 7′ × 1′ 8″.

[1]ಸ್ವೈದರೋರ್ಷ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

100

ಅದೇ ಗ್ರಾಮದ ಗೋಪಾಲಸ್ವಾಮಿ ದೇವಸ್ಥಾನದ ಯದುರಿಗೆ ಯಿಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 1′ 1″ × 1′ 4″.

1 ಸ್ವಸ್ತಿಶ್ರೀಮತ'ಪ್ರತಾಪಚಕ್ರವರ್ತ್ತಿಹೊಇಶಳ
2 ಶ್ರೀವೀರಬಲ್ಲಾಳದೇವರಸರುದೊರಸಮುದ್ರಲುನೆ
3 ಲೆಬೀಡಂಕಟ್ಟಿಶುಖಸಂಕಥಾವಿನೋದದಿಂರಾಜ್ಯಂಗೆ
4 ಯ್ಯುತ್ತಿರೆ ॥ ಶಕವರುಷ ೧೨೩೮ ನೆ
5 ನಳಶಂವತ್ಸರದವಯಿಸಾಖಸುದ್ಧ
6 ೧೩ ಬುಧವಾರದದಿನಶ್ರೀಮದನಾದಿ
7 ಯಗ್ರಹಾರಂಮಲ್ಲಿಕಾರ್ಜ್ಜುನಪುರವಾದಗು
8 ತ್ತಲಗೋಪಾಳದೇವನಮಕ್ಕಳುವಿಸ್ಸಂ
9 ಣ್ಣಂಗಳುಅಲ್ಲಪ್ಪನುಕಾಣಂಕ್ರಯಕೊಂಡಬಸದಿಪಳ್ಳಿಯಮ
10 ದುರೆಯದಕುಲದಕೇಪಗವು
11 ಡನಮಕ್ಕಳುಗಲುಡಿತಂಮಂಗೆಕೊಟ್ಟ
12 ಶಿಲಶಾಸನದಕ್ರಮವೆಂತೆಂದಡೆತಾ
13 ವರೆಯಕೆಱೆಯಹಿರಿಯತುಂಬಿನಕೆಳ

ಕಲ್ಲಿನ ಹಿಂಭಾಗದಲ್ಲಿ.

14 ಗೆಕಟ್ಟಕಂಮಹದಕೊಡಿಗೆತಱೆಯದಮದಿನಲುತ
15 ೦ಮಹಳ್ಳಿಗೊಡಗೆಈಂದತೆಂಕಲುವಿಸ್ಸಂಣ್ಣಂಗ
16 ಳಭಾಗದಲುಸ೧ ಕೊ ೧ಂಗದ್ದೆತಂಮ
17 ಡಿಹಳ್ಳಿಯಲುವಿಸ್ಸಂಣ್ಣಂಗಳಭಾಗದಅಲು
18 ೪ಂಂಸುಳಿಪೆದ್ದಲನೂಬಸದಿಹಳ್ಳಿಯಲುಗ
19 ವುಡಿತಂಮಂಗೆಸಂಣ್ಣಗವುಡನಮಣಇಂದಮೂ
20 ಡಲುಹ೧೫ ಕೈಮನೆಯನುಕೊಟ್ಟುಅಂತುನಾನೂ
21 ಱುಪೆದ್ದಲಂಗೆಮೂವತ್ತುಕೊಳಗಗದ್ದೆಗೆಹದಿನೈದು
22 ಕೈಮನೆಆಗಿಯಾಕೊಡಗೆದೆಱೆಆಗಿವರುಷಂ
23 ಪ್ರತಿಆಗಿವರುಷವರುಷ।೪ ತೆಱುವರುಗು
24 ತ್ತಲಗವುಗಳಮರಿಆದಿಯಬೆಳುಕಾಡಿನಬಳಿಯತೆಱ ।೪ರು
25 ಇಮರಿಆದಿಗೆವಿಸ್ಸಂಣ್ಣನಅಲಪ್ಪಂಗವಃಗವುಡತಮಂಗೆಕೊ
26 ಸಾಸನಇಂತಪ್ಪುದಕ್ಕೆಸಾಕ್ಷಿದರಣಿದೇವನಾಗಣ್ಣಗು [ಟ್ಟ
27 ತ್ತಲನಾಲ್ವರುಗವುಡಗಳುಸ್ಥಾನಿಕರುನಾಲ್ವರುಕುಂಬಾ
28 ರುಹೆಗ್ಗಡಿಗಳುಕನಬೋವನೊಳಗಾದನಾಲ್ವಬೊವ
29 ಗಳುಅಜೋಜಜಕೋಜಅಸಗರಭಿಮನಾಇಂದಹೆಬಹೊ
30 ಲೆಮಂಡನಯಾಕಗುತ್ತಲಪಂಡಿತರಬರೆಯಪ್ಪ
31 ಗುತ್ತಲಅದೊಳುಮತರಸಮಾಡಿದುಭೋಜ . . . .

101

ಅದೇ ಹೋಬಳಿ ಬೇಲೂರು ಗ್ರಾಮದ ಕೆರೆಕಟ್ಟೆಯಮೇಲೆ ಮಾಸ್ತಿ ಅಮ್ಮನಗುಡಿಯ ಬಳಿಯ ವೀರಕಲ್ಲಿನಲ್ಲಿ.

ಪ್ರಮಾಣ 4′ 9″ × 2′ 6″.

1 ಬಾನ . . . .
2 ಱಕೆಯಿಸ
3 ಯನಾಯ
4 ಕನಮಗಂ
5 ಹೊಲವನಾ
6 ಯಕಬಳ
7 ಗುದನಾಡ
8 ಬೇಲೂರೂ
9 ದಲುತುಱು

(ಇನ್ನು 6 ಪಙ್ತಿಗಳಿವೆ.)

102

ಅದೇ ಹೋಬಳಿ ಪುರಗ್ರಾಮದ ವೀರಗುಡಿಯ ದಕ್ಷಣಕ್ಕೆ ಇರುವಕಲ್ಲಿನಲ್ಲಿ.

ಪ್ರಮಾಣ 4′ × 3′ 3″.

1 ಶ್ರೀಮತ್ತುಪ್ರತಾಪಚಕ್ರವರ್ತ್ತಿಹೋಶಳಶ್ರೀಬಳಾಲ
2 ದೇವರಸರುಪ್ರಿಥಿವಿರಾಜ್ಯಂಗೇವತ್ತಿರಲುಸಕವರುಷ . . . . . .

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

3 ೧(೨)೪೧ನೆಯಕಳಯುಕುತಸಂವತ್ಸರದ . . . .
4 . . . . ವ । ಶ್ರೀಮದನಾದಿಯಗ್ರಹಾರಂಮಲ್ಲಿಕಾರ್ಜುನಪುರ
5 ಮಾದಗುತ್ತಲ . . . . ಮಕ್ಕಳುಪರಮದೇವನ . . . .

(ಇನ್ನು 11 ಪಙ್ತಿಗಳಿವೆ, ಕಾಣುವದಿಲ್ಲ.)

103

ಅದೇ ಗ್ರಾಮದಲ್ಲಿರುವ ಮಂಟಪದ ವೀರಕಲ್ಲಿನಲ್ಲಿ.

ಪ್ರಮಾಣ 4′ 9″ × 2′4″.

1 . . . . . . ವದ . . . . ರಾ . . . .
2 . . . . . . ವೀರಪ್ರತಾಪಶ್ರೀ
3 . . . . ರಾಯಮಹಾರಾಯರುಪ್ರ
4 ತ್ವಿರಾಜ್ಯಂಗೆಯುತಿರೆಶಖವರು
5 ಸ ೧೪೩೯ನೆ ಹೇಮಳಂಬಿಸಂವತ್ಸರದಬಾದ್ರಪದ
6 ಸು ೫ ಶ್ರೀಸಹಾಡ್ಲ ಯುಪುರದಮರೆ . . . . ಮಗಬುತಿ
7 ಖರನುಶ್ವರ್ಗಸ್ತನಾದಲಿಆತನಹೆಂಡತಿಯರು
8 ಮೂವರುತೋಳುಕಯಿಕೊಟಕಂಬ । ಅವಿನಯ
9 ಬಸವಭಕ್ತನಮಗಬೊಂಮಂಣನುದನವಕಾದಿ
10 ಬಸವಭಕ್ತನಮಗಂಬಿಜಯಶ್ರೀ

104

ಅದೇ ಹೋಬಳಿ ತಗ್ಗಿಹಳ್ಳಿ ಗ್ರಾಮದ ಊರಿನ ಮುಂದೆ ಜಗತೀಕಟ್ಟೆಯ ಬಳಿ ಯಿರುವ ಕಲ್ಲಿನಲ್ಲಿ.

ಪ್ರಮಾಣ 2′ 6″ × 1′ 8″.

1 . . . .
2 . . . . . . ಬ ೫ಲು ಶ್ರೀಮನು
3 . . . . ಮಲ್ಲರಾಜವೊಡೆ
4 . . . . . . ಹಳವಾಡಿತಿಪ್ಪವೊಡೆ
5 ಯರು . . . . . . ಮಲ್ಲದೇವರಸನ
6 . . . . . . ಗಲುಡಹಳ್ಳಿಗ್ರಾಮ
7 . . . . ಮನ . . . . . .

105

ಅದೇ ಹೋಬಳಿ ಹಲವಾಡಿ ಗ್ರಾಮದ ಮೂರಬಾಗಲಬಳಿ ಪೂರ್ವ್ವಕ್ಕೆ ಯಿರುವ ಕಲ್ಲಿನಲ್ಲಿ.

ಪ್ರಮಾಣ 3′ 6″ × 1′ 9″.

1 ಶುಭಮಸ್ತು . . ಶ್ರೀವಿಜಯಾಭ್ಯುದ
2 ಯಶಾಲಿವಾಹನಶಕವರುಷಸ ೧
3 ೪೫೩ನೆಯ ವರ್ತಮಾನಕ್ಕೆಸಲುವ
4 ಖರಸಂವತ್ಸರದಶ್ರಾವಣಬ ೧೦
5 . . . . ದಣಾಯಕ
6 . . . . ರಸನು . . . . . . ಜ್ಯಗೆವೆ . . . . . .
7 . . . .
8 . . . . ಲಿಂಗಣವೊಡೆಯರಮಗದೇವರ

(ಇನ್ನು 2 ಪಙ್ತಿಗಳಿವೆ.)

106

ಅದೇ ಹೋಬಳಿ ಕೊತ್ತತ್ತಿ ಗ್ರಾಮದ ಬೋರೇದೇವರ ಗುಡಿಯ ನೈರುತ್ಯಕ್ಕೆ ಯಿರುವ ವೀರಕಲ್ಲಿನಲ್ಲಿ.

ಪ್ರಮಾಣ 6′ × 3′ 8″.

1 ಸ್ವಸ್ತಿ ಶ್ರೀಮನ್ಮಹಾಮಂಡಳೇಸ್ವರತ್ರಿಭುವನಮಲ್ಲತಳಕಾ
2 ಡುಗೊಂಡವೀರಹೊಯ್ಸಳಬಲ್ಲಾಳುದೇವರುಪೃಥಿವಿರಾಜ್ಯಂ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

3 ಗೆಯ್ಯುತ್ತ ವಿರಲುಸ್ವಸ್ತಿ ಶ್ರೀಮತುಬಲಗಯ್ಯಸೇಣಪ

4 ತಿಹವಂತ್ತಸೊಪಿಯಪುತ್ರಂ . . . . ಸಾಸಿರದನೂಜಿಹದಿಮೂ

5 ಬು ೧೧೧೩ ವಿರೋಧಿಕ್ರತುಸಂವತ್ಸರದಜ . . . . ದೂ

6 ನಾಡಕೊತ್ತತ್ತಿಯ . . . . ಯರಕುಲ . . . . ಹಾರದಹ

7 ಳೆಯಹೆಗಡೆಶ್ರೀಭರು . . . . ಸ್ವರ್ಗ್ಗಸ್ತರಾದರು ॥

107

ಅದೇ ದೇವಸ್ಥಾನದ ಹಿಂದೆಯಿರುವ ವೀರಕಲ್ಲಿನಲ್ಲಿ.

ಪೂರ್ವದ ಹಳಗನ್ನಡಕ್ಷರ.—ಪ್ರಮಾಣ 5′ 6″ × 3′ 6″.

1 ಸ್ವಸ್ತಿಸಕನೃಪಕಾಲಾತೀತಸಂವತ್ಸರಸತಂಗ ೮೯೯ತ್ತನೆಯ ಪ್ರಮಾದಿಸಂ

2 ವತ್ಸರಪ್ರವರ್ತ್ತಿಸೆ ॥ ಸ್ವಸ್ತಿಸತ್ಯವಾಕ್ಯಕೊಂಗುಣಿದವರ್ಮ್ಮದವರ್ಮ್ಮಮಹಾರಾಜಾದಿ

3 ರಾಜಕುವಳಾಳಪುರವರೇಶ್ವರನನ್ದಿಗಿರಿನಾಥಜಗದುತ್ತರಂಗುಳಹರಳಾನ್ತಕಂ

4 ಶ್ರೀಮತ'ರಾಜಮಲ್ಲಸೆವರ್ಮ್ಮನಡಿಗಳ್ಪ್ರಿಥಿವಿರಾಜ್ಯಂಗಯ್ಯುತ್ತಿರೆಶ್ರೀಮದೀಸರ

5 ಗಣ್ಡಶ್ರೀರಾಜಪ್ರೇಮರಾಜಮಲ್ಲನರೆಪಂದಣ್ಡೆತ್ತೆ ಬಹಮುಳಿಬ್ದೊರಿನ್ನಾಯಕನಿಪ್ಪಪಲ್ಲವ

6 ಬಳಮುಂಅನ್ತಆನ್ತಿಸರಣ . . ರಾ . . ಕಟ್ತಿ . ಟ್ತಿ . . ವುರ್ಬ್ಬಬಾಟ್ಸಿನಂಕಾವತೊಬಿರಕಾ

7 ದರಮಾಗಿಸತ್ವಪಡೆ . . . . ಕೊತ್ತತ್ತಿಯ . . ತಳಮಾದಿವರ್ಣ್ನಿನಿಜಭುಜ

8 ಸಿಲಾಬಾಯ್ನಿಟ್ಕವುನ್ತಷವನಂತಳನದತೊಳತಿನಿದಿಟ್ಸಿಮಲ್ಲವಿನದಲದಟ್ತಿಯ

9 ನ್ದಂಮುನ್ಮ್ಮಲೆದರನಟ್ಟಿತಳ್ತಉಿದು . . . . . . ವುದೂರಮಲ್ಲಿಕಾರ್ಜ್ಜುನಂಸಿರಿಪಾಗಲಲುಸ

10 ರಾಜಮಲ್ಲದೇವ . . . . ತ್ಯರಲಿರಪ

11 . . . . ದಕವಡಿ . . . . ಸದಗಮಟ್ಟಿಸಿ

(ಇನ್ನು 5 ಪಙ್ತಿಗಳಿವೆ.)

108

ಅದೇ ಗ್ರಾಮದ ಈಶ್ವರದೇವಾಲಯದ ಪಶ್ಚಿಮಕ್ಕೆ ಇರುವ ಕಲ್ಲಿನಲ್ಲಿ.

ಪ್ರಮಾಣ 4′ 3″ × 2′ 3″.

1 ವಿಪ್ಪರನಾಯಕನು

2 ದರ್ಮ್ಮ . . . .

109

ಅದೇ ಹೋಬಳಿ ಮೋಟಹಳ್ಳಿಗ್ರಾಮದ ಬೋರೇದೇವರ ದೇವಸ್ಥಾನದ ನೈಋತ್ಯಕ್ಕೆ ಇರುವ ವೀರಕಲ್ಲಿನಲ್ಲಿ.

ಪ್ರಮಾಣ 4′ 6″ × 3′ 6″.

1 ಸ್ವಸ್ತಿಶ್ರೀಮನ್ಮಹಾಮಂಡಳೇಸ್ವರತ್ರಿಭುವನಮಲ್ಲತಳೆಕಾಡುಗೊಂಡಂವೀರಬಲ್ಲಾ

2 ಳುದೇವರುಪ್ರಿತುವಿರಾಜ್ಯಂಗೆಯ್ಯುತ್ತಮಿರಲುಸ್ವಸ್ತಿಶ್ರೀಮತುಬಲಗಯ್ಯಸೇಣಾ

3 ದಿಪತಿಸಾವಂತಂಸೊಸಿಯಪ್ಪನಾಯಕರಿಗೆತಿಉಿವೆಸಕಹೋಗಿಯಮಿರೋ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

[4]ದಿಕ್ರಿತುಸವುತ್ಸರದಚಯಿತ್ರಸು..............ಆದಿವಾರದಂ
[5]ದುಬಡಗುಂದುನಾಡಕೊತ್ತತ್ತಿ............ರಿವುಉದಗಾವುಂಡನ
[6]ಮಗಂಸೂವನ್ತನಹಳೆ...............ಕಾಳುಬೊವಮಾರ....

110

ಅದೇ ಗ್ರಾಮದ ಬಸವನಗುಡಿಯು ಪಶ್ಚಿಮಕ್ಕೆ ಬಿದ್ದು ಇರುವ ಕಲ್ಲಿನಲ್ಲಿ.

ಪ್ರಮಾಣ 5′ 6″ × 2′ 6″.

[1]ಬಾವಸಂವತ್ಸರದ......
[2]......ಮಹಾರಾಜಾದಿರಾಜ
[3]ರಾಜಪರಮೇಶ್ವರ........
[4]..ಶ್ರೀಮತುಕೃಷ್ಣದೇವರಾಯಮಹಾರಾಯ..

111

ಅದೇ ಹೋಬಳಿ ನಾಳನಕೆರೆ ಗ್ರಾಮದ ಬಸವನಗುಡಿಯ ಪಶ್ಚಿಮಕ್ಕೆ ಇರುವ ಕಲ್ಲಿನಲ್ಲಿ.

ಪ್ರಮಾಣ 3′ 9″ × 1′ 6″.

[1]ದುಂದುಬಿಸಂವತ್ಸರದಮಾ
[2]ಘಸು ೧೪ಶ್ರೀರಾಜಂಕೈದಾನವಾ
[3]ದೆಣವೊಡೆರಮಗರಾಚತಾಕಿ
[4]ಣಾಲಕೆಜಿಗೆಬಿಟ್ಟಣಸಮಿಚ

(ಇನ್ನು 23 ಪಙ್ತಿಗಳಿವೆ, ಕಾಣುವದಿಲ್ಲ.)

112

ಅದೇ ಹೋಬಳಿ ಹೆಬ್ಬಕವಾಡಿ ಗ್ರಾಮದ ಮಲ್ಲೇಗೌಡನ ಮನೆಯ ಉತ್ತರಕ್ಕೆ ಇರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′ 6″.

[1]ಸ್ವಸ್ತಿಶ್ರೀಮತುಸಕವರುಶಸಾವಿರದನಾ
[2]ನೂಜಅಜ್ಪತ್ತನೆಯುಹೇಮಳಂಬಿಸಂ
[3]ವಚ್ಸರದವಯಿಶಾಖಸುದ ೧೦ ಲೂ ಸೋವ
[4]ನಾಥಪುರದಚಂನ್ನಕೇಶವದೇವರಅಂಗಭೋಗಕೆ
[5]ಸಲುವಹೆಬ್ಬಕವಾಡಿಯನೂಶ್ರೀಮಂನ್ಮಹಾಮಂಡಲೇಶ್ವರ
[6]ಅಚುತರಾಯರಿಗೆಪುಂಣ್ಯವಾಗಬೇಕೆಂದುವಾರಣಾಸಿವದದೈ
[7]ಅಂಣ್ಣಯ್ಯನವರೂಮಾಡಿದಜೀರ್ನ್ನಉದ್ಧಾರಾ ॥

113

ಹಳ್ಳೆಗೆರೆ ಗ್ರಾಮದ ಕೃಷ್ಣಪ್ಪನ ವಶದಲ್ಲಿರುವ ತಾಮ್ರಶಾಸನ.

5 ಪತ್ರಗಳು.—ಪ್ರಮಾಣ 9½″ × 3½″.

ಪೂರ್ವದ ಹಳಕನ್ನಡಕ್ಷರ.—ಉಂಗ್ರದ ಮೇಲೆ ಗಜಮುದ್ರೆ ಇದೆ.

೧ನೇ ಪತ್ರದ ಹಿಂಭಾಗ.

[1]ಸ್ವಸ್ತಿ ಜಿತಮ್ಭಗವತಾಗತಘನಗಗನಾಭೇನಪದ್ಮನಾಭೇನಶ್ರೀಮಜ್ಜಾಹ್ನವೇಯಕುಲಾಮಲವ್ಯೋಮಾವಭಾಸನಭಾಸ್ಕರಃಸ್ವ
[2]ಖಡ್ಗೈಕಪ್ರಹಾರಖಣ್ಡಿತಮಹಾಶಿಲಾಸ್ತಮ್ಭಲಬ್ಧಬಲಪರಾಕ್ರಮೋದಾರುಣಾರಿಗಣವಿದಾರಣೋಪಲಬ್ಧವ್ರಣವಿಭೂಷಣವಿ
[3]ಭೂಷಿತಃಕಾನ್ವಾಯನಸಗೋತ್ರಃಶ್ರೀಮಾತ್ಕೊಙ್ಗಣಿವರ್ಮ್ಮಧರ್ಮ್ಮಮಹಾಧಿರಾಜಃತಸ್ಯಪುತ್ರಃಪಿತುರನ್ವಾಗತಗುಣಯುಕ್ತೋ
ವಿದ್ಯಾವಿನ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

4 ಯವಿಹಿತವೃತ್ತಿಃಸಮ್ಯಕ್ಪ್ರಜಾಪಾಲನಮಾತ್ರಾಧಿಗತರಾಜ್ಯಪ್ರಯೋಜನೋವಿದ್ವತ್ಕವಿಕಾಞ್ಚನನಿಕಷೋಪಲಭೂತೋನೀತಿಶಾ
5 ಸ್ತ್ರಸ್ಯವಕ್ತೃಪ್ರಯೋಕ್ತೃಕುಶಲೋದತ್ತಕಸೂತ್ರವೃತ್ತೇಃಪ್ರಣೇತಾಶ್ರೀಮಾನ್ಮಾಧವಮಹಾಧಿರಾಜಃತತ್ಪುತ್ರಃಪಿತೃಪೈತಾಮಹ
6 ಗುಣಯುಕ್ತೋನೇಕಚಾತುರ್ದ್ದನ್ತಯುದ್ಧಾವಾಪ್ತಚತುರುದಧಿಸಲಿಲಾಸ್ವಾದಿತಯಶಾಶ್ರೀಮಾನ್ಹರಿವರ್ಮ್ಮಮಹಾಧಿರಾಜಃತತ್ಪು
ತ್ರೋದ್ವಿಜಗು
7 ರುದೇವತಾಪೂಜನಪರೋನಾರಾಯಣಚರಣಾನುಧ್ಯಾತಃಶ್ರೀಮಾನ್ವಿಷ್ಣುಗೋಪಮಹಾಧಿರಾಜಃತತ್ಪುತ್ರಃತ್ರ್ಯಮ್ಬಕಚರಣಾ
ಮ್ಭೋರುಹರಜಃಪವಿ
8 ಕೃತೋತ್ತಮಾಂಗಃಸ್ವಭುಜಬಲಪರಾಕ್ರಮಕ್ರಯಕ್ರೀತರಾಜ್ಯಃಕ್ಷುತ್ಕ್ಷಾಮೋಪಸ್ಥಿತಾಸನಪ್ರೀತಿಕರನಿಶಿತಧಾರಾಸೀಕಲಿಯುಗ

೨ನೇ ಪತ್ರದ ಮುಂಭಾಗ.

9 ಬಲಪಙ್ಕಾವಸನ್ನಧರ್ಮ್ಮವೃಷೋದ್ಧರಣನಿತ್ಯಸನ್ನದ್ಧಃಶ್ರೀಮಾನ್ಮಾಧವಮಹಾಧಿರಾಜಃತತ್ಪುತ್ರಃಶ್ರೀಮತ್ಕದಮ್ಬಕುಲಗಗನಗ
ಭಸ್ತಿಮಾಲಿ
10 ನಃಶ್ರೀಮತ್ಕೃಷ್ಣವರ್ಮ್ಮಮಹಾಧಿರಾಜಸ್ಯಪ್ರಿಯಭಾಗಿನೇಯೋವಿಜೃಮ್ಭಮಾಣಶಕ್ತಿತ್ರಯಸಮ್ಪನ್ನಃಸಮ್ಭ್ರಮಾವನತಸಮ
ಸ್ತಸಾಮನ್ತಮ [ಮಹಾ
11 ಣ್ಡಲೋವಿದ್ಯಾವಿನಯಾತಿಶಯಪರಿಪೂರಿತಾನ್ತರಾತ್ಮಾನಿರವಗ್ರಹಃ ಪ್ರಧಾನಶೌರ್ಯ್ಯೋ ವಿದ್ವತ್ಸುಪ್ರಥಮಃಗಣ್ಯಃಶ್ರೀಮಾನ್ಕೊಙ್ಗಣಿ
12 ಧಿರಾಜಃಅವಿನೀತನಾಮಾತತ್ಪುತ್ರಃವಿಜೃಮ್ಭಮಾನಶಕ್ತಿತ್ರಯಃಅನ್ದರಿಆಲತ್ತೂರ್ಪೊರುಳಱೆಪೆನ್ನಗರಾದ್ಯನೇಕಸಮರ
13 ಮುಖಮುಖಹೂತಪ್ರಹತಶೂರಪುರುಷಪಶೂಪಹಾರವಿಘಸವಿಹಸ್ತೀಕೃತಕೃತಾನ್ತಾಗ್ನಿಮುಖಃಕಿರಾತಾರ್ಜ್ಜುನೀಯಪಞ್ಚದ
14 ಶಸರ್ಗ್ಗಟೀಕಾಕಾರಃದುರ್ವ್ವಿನೀತನಾಮಧೇಯಃಶ್ರೀಮಾನ್ಕೊಙ್ಗಣಿವೃದ್ಧರಾಜಃತಸ್ಯಪುತ್ರಃದುರ್ದ್ದಾನ್ತವಿಮರ್ದ್ದವಿಮೃದಿತವಿಶ
ಮ್ಭರಾಧಿಪಮೌಲಿ
15 ಮಾಲಾಮಕರನ್ದಪುಞ್ಜಪಿಞ್ಜರೀಕ್ರಿಯಮಾನಚರಣಯುಗಲನಳಿನಃಶ್ರೀಮಾನ್ಕೊಙ್ಗಣಿವೃದ್ಧರಾಜೋಮುಷ್ಕರದ್ವಿತೀಯನಾಮ
ಧೇಯಃತ
16 ದಾತ್ಮಜಃಉದಿತೋದಿತಸಕಲದಿಗನ್ತರಪ್ರಥಿತಸಿನ್ಧುರಾಜದುಹಿತೃಜನನೀಕಃಶ್ರೀವಿಕ್ರಮಪ್ರಥಿತನಾಮಧೇಯಃಶ್ರೀಮಾನ್ಕೊ

೨ನೇ ಪತ್ರದ ಹಿಂಭಾಗ.

17 ಙ್ಗಣಿಮಹಾಧಿರಾಜಃಚತುರ್ದ್ದಶವಿದ್ಯಾಸ್ಥಾನಾಧಿಗಮವಿಮಲಮತಿಃವಿಶೇಷತೋನವಶೇಷಸ್ಯನೀತಿಶಾಸ್ತ್ರಸ್ಯವಕ್ತೃಪ್ರಯೋಕ್ತೃ
18 ಕುಶಲೋರಿಪುತಿಮಿರನಿಕರನಿರಾಕರಣೋದಯಭಾಸ್ಕರಃಪ್ರವರವಿದಗ್ಧಮುಗ್ಧಲಲನಾಜನೈಕರತಿಪಞ್ಚತಸ್ಯಪುತ್ರಃಅನೇಕಸ
19 ಮರಸಮ್ಪ್ರಾಪ್ತವಿಜೃಮ್ಭಿತದ್ವಿರದರದನಕುಲಿಶಭಿಘಾತವ್ರಣಸಮೂಢಭಾಸ್ವದ್ವಿಜಯಲಕ್ಷಣಲಕ್ಷೀಕೃತವಿಶಾಲವಕ್ಷಸ್ಥಲಃ
20 ಶಕ್ತಿತ್ರಯಸಮನ್ವಿತಃಸಮಧಿಗತಸಕಲಶಾಸ್ತ್ರಾರ್ತ್ಥತತ್ವಃಸಮಾರಾಧಿತತ್ರಿವರ್ಗ್ಗಃನಿರವದ್ಯಚರಿತಃಪ್ರತಿದಿನಮಭಿವರ್ದ್ಧಮಾ
21 ನಪ್ರಭಾವಃಶ್ರೀಮಾನ್ಕೊಙ್ಗಣಿಮಹಾಧಿರಾಜಃಭೂವಿಕ್ರಮದ್ವಿತೀಯನಾಮಧೇಯಃಅಪಿಚ । ನಾನಾಹೇತಿಪ್ರಹಾರಪ್ರವಿ
22 ಘಟಿತಭಟೋರಃಕವಾಟೋತ್ಥಿತಾಸೃಗ್ಧಾರಾಸ್ವಾದಪ್ರಮತ್ತದ್ವಿಪಶತಚರಣಕ್ಷೋದಸಮರ್ಮ್ಮಭೀಮೇಸಂಗ್ರಾಮೇಪಲ್ಲವೇನ್ದ್ರನ್ನರ
23 ಪತಿಮಜಯದ್ಯೋವೇಳನ್ನಾಭಿಧಾನೇರಾಜಾಶ್ರೀವಲ್ಲಭಾಖ್ಯಸ್ಸಮರಶತಜಯಾವಾಪ್ತಲಕ್ಷ್ಮೀವಿಲಾಸಃ । ಕೃತ್ವಾಪಲ್ಲವಮಾ
24 ಶುಪಲ್ಲವದಲಪ್ರಚ್ಛಾಯದುರ್ಗ್ಗಾಸ್ಪದಂತಸ್ಯಾನ್ತಃಪುರಸುನ್ದರೀರಪಿಬಲಾದಾಹೃತ್ಯಸರ್ವ್ವೋಮುವತಃಆತ್ಮೀಕೃತ್ಯಚತಸ್ಯಚ

೩ನೇ ಪತ್ರದ ಮುಂಭಾಗ.

25 ಕ್ರಮಖಿಲಂಯಃಕಣ್ಟಕಾನ್ಯಗ್ರಹೀನ್ಶ್ರೀಮಾನ್ಭೂಪಶಿಖಾಮಣಿರ್ಮ್ಮನಸಿಜಶ್ರೀಶ್ಲಾಘನೀಯದ್ಯುತಿಃತಸ್ಯಾನುಜಾನತನರೇನ್ದ್ರಕಿ
ರೀಟಕೋಟಿ
26 ರತ್ನಾರ್ಕ್ಕದೀಧಿತಿವಿರಾಜಿತಪಾದಪದ್ಮಃಲಕ್ಷ್ಮ್ಯಾಸ್ವಯಂವೃತಪತಿರ್ನ್ನವಕಾಮನಾಮಾಶಿಷ್ಟಪ್ರಿಯೋರಿಗಣದಾರಣಗೀತಕೀರ್ತ್ತಿಃ।
ಲಕ್ಷ್ಮೀವಕ್ಷಸ್ಥಲಸ್ಥಃ
27 ಹರತಿಮುರರಿಪೋಃಕೀರ್ತ್ತಿಮಾಕ್ರಷ್ಟುಮಿಷ್ಟೇಶುದ್ಧಾಂರಾಮಸ್ಯವೃತ್ತಿಂಬುಧಜನಮಹಿತಾಂಮಾನವಿಂಸ್ವೀಕರೋತಿನಿರ್ವ್ವಾ
ಖ್ಯೋಲೋಕಧೂರ್ತ್ತಃಪರಯುವ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

28 ತ್ರಿಪರೋದೇವರಾಜೋಪನಿನ್ದ್ಯಃಚಿತ್ರಕಿಂಚಾತ್ರಚಿತ್ರಂಫಲಮುಪರಮತಃಕಿನ್ತುಃಷ್ಟಪ್ರಿಯತ್ವಾ । ಮೇರೋಕಾಃಟ್ಠನಮೋಖ
ಲಾನ್ತವಿಲ

29 ಸತ್ತ್ರಾವಲಿಪ್ರಷ್ಪಿತೇಕೈಲಾಸಾದ್ರಿತಟೇಚಶೈಲತನಯಾಪಾದಾರವಿನ್ದಾಂಗಿತೇರೇವಾಮಾರುತಮನ್ದಕಮ್ಪಿತವನಾಭೋಗೇ

30 ವವಿನ್ಧ್ಯಚಲಗಾಯನ್ತ್ಯರ್ದ್ದ್ರಮೃಣಾಲಖಣ್ಡಧವಳಂಯಚ್ಚೇಷ್ಟಿತಂಕಿನ್ನರಾಃಯಸ್ಯದ್ವಿಷನೃಪತಿವಾಸಗೃಹೋದರೇಷುಸ
ದ್ಯೋಹತದ್ವಿ

31 ರದವಾನಕೃತಾಙ್ಗರಾಗಾಃಆಲೋಕಯನ್ತಿ ಮುಷಿತಾಃಸುರತಾವಸಾನೇಚ್ಛಾಯಾಂಕಿರಾತವನಿತಾಮಣಿವೇದಿಕಾಸು । ತನಾನೇ
ಕನೃಪತಿ

32 ಮಕುಟಕೋಟಿಲಾಳಿತಶಾಸನೇನಶತ್ರುಶಾಸನೇದ್ವಿಷಲ್ಲಕ್ಷ್ಮಿಕವಗ್ರಹಗ್ರಹಣಭುಜರಕ್ಷಾಪ್ರಿಯಮಾಣಜನತಾಪ್ರಿಯೇಣಶ್ರೀ

೩ನೇ ಪತ್ರದ ಹಿಂಭಾಗ.

33 ಮತ್ಪೃಥಿವಿಕೊಙ್ಗಣಿಮಹಾರಾಜೇನಶಿವಮಾರನಾಮಧೇಯೇನಪಲ್ಲವಯುವರಾಜಸ್ಯಪ್ರಿಯತನಯಾಭ್ಯಾಂ ಜಯುವೃದ್ಧಿಪಲ್ಲವಾ
ಧಿರಾಜಾ

34 ಭ್ಯಾಂವಿಜ್ಞಾಪಿತೇನಪಞ್ಚತ್ರಿಂಶೋತ್ತರಷಟ್ಛತೇಷುಶಕವರ್ಷೇಷ್ವತೀತೇಷುಆತ್ಮನ ಪ್ರವರ್ದ್ಧಮಾನವಿಜಯೈಶ್ವರ್ಯ್ಯಸಂವತ್ಸ
ರೇಚತುಸ್ತ್ರಿಂಶತ್ತೇ

35 ಪ್ರವರ್ತ್ತಮಾನೇತಲವನಪುರಮಧಿವಸತಿವಿಜಯಸ್ಕನ್ಧಾವಾರೇಜ್ಯೇಷ್ಠಮಾಸಪೂರ್ಣ್ಣಮಾಸ್ಯಾಂಕೆಱೆಗೋಡು ವಿಷಯೇಕೆಱೆ
ಗೋಡುತ್ತರಪಾರ್ಶ್ವ

36 ಕಿಱನೇನದೀಸೇತುಂಬನ್ಧಯಿತ್ವಾತಸ್ಯಪಿವರ್ದ್ಧ್ಯಾಃದಕ್ಷಿಣತಃಕೋಡುಗೊಳಬೆಳ್ಕರೆಸಹಿತಂಉತ್ತರತಃಪ್ಮುಮ್ಪಾಲ್ಪುಣು

37 ಸೆಪಟ್ಟಸಹಿತಂಪಲ್ಲವತಟಾಕಮಿತಿಗ್ರಾಮಸ್ಯನಾಮಧೇಯಂಕೃತ್ವಾತಂಗ್ರಾಮಂಷಟ್ಷಷ್ಟಿಭಾಗಯುಕ್ತಂಕೃತ್ವಾತತ್ರಷಟ್ತ್ರಿಂ

38 ಶದ್ಭಾಗಾಆತ್ರೇಯಸಗೋತ್ರಾಯವಾಜಸನೇಯಚರಣಾಯಮಹಾಸೇನಪುರವಾಸ್ತವ್ಯಾಯಭವಶರ್ಮ್ಮಣಃಪೌತ್ರಾಯ [ತೇಭ್ಯ

39 ಮಾರಶರ್ಮ್ಮಣಃಪುತ್ರಾಯಮಾಧವಶರ್ಮ್ಮಣೇಉಕ್ಥ್ಯಯಾಜಿನೇಉದಕಪೂರ್ವ್ವನ್ದತ್ತಾಃಅವಶಿಷ್ಟಾಸ್ತ್ರಿಂಶದ್ಭಾಗಾಯಥಾಲಿಖಿ

40 ಸ್ತ್ರಿಂಶದ್ಭ್ಯೋಬ್ರಾಹ್ಮಣೇಭ್ಯೋದತ್ತಾಃಹಾರೀತಸಗೋತ್ರಾಯಕೇಶವಶರ್ಮ್ಮಣೇಭಾರದ್ವಾಜಸಗೋತ್ರಾಯಮಾಧವಶರ್ಮ್ಮಣೇ
ಗೌತಮ

41 ಗೋತ್ರಾಯಮಾಧವಶರ್ಮ್ಮಣೇವಾಸಿಷ್ಠಗೋತ್ರಾಯಆರ್ಯಶರ್ಮ್ಮಣೇಘಟಿಕಾಸಾಹಸಾಯಹಾರೀತಸಗೋತ್ರಾಯಮಾಧ

೪ನೇ ಪತ್ರದ ಮುಂಭಾಗ.

42 ವಶರ್ಮ್ಮಣೇಗಾರ್ಗ್ಯಸಗೋತ್ರಾಯಚಪ್ಪಶರ್ಮ್ಮಣೇಲೋಹಿತಸಗೋತ್ರಾಯಗೊಬ್ಬಶರ್ಮ್ಮಣೇಭಾರದ್ವಾಜಸಗೋತ್ರಾ

43 ಯನಾಗಶರ್ಮ್ಮಣೇವತ್ಸಸಗೋತ್ರಾಯಶರ್ವ್ವಶರ್ಮಸೋಮಯಾಜಿನೇತಸ್ಯಪುತ್ರಾಯರುದ್ರಶರ್ಮ್ಮಣೇಲಕ್ಷಣ್ಯಸಗೋತ್ರಾಯ

44 ತ್ರಿವಿಕ್ರಮಶರ್ಮ್ಮಣೇಕಾಶ್ಯಪಸಗೋತ್ರಾಯಮಾಧವಶರ್ಮ್ಮಣೇಗಾರ್ಗ್ಯಸಗೋತ್ರಾಯವಿನಯಶರ್ಮ್ಮಸೋಮಯಾಜಿನೇಕೌ
ಣ್ಡಿನ್ಯಸ [ಣೇ

45 ಗೋತ್ರಾಯಈಶ್ವರಸೋಮಯಾಜಿನೇಆತ್ರೇಯಸಗೋತ್ರಾಯಪಿಟ್ಟಶರ್ಮ್ಮಸೋಮಯಾಜಿನೇಭಾರದ್ವಾಜಗೋತ್ರಾಯಪಿಟ್ಟಶರ್ಮ್ಮ

46 ಕಾಶ್ಯಪಗೋತ್ರಾಯನಾರಾಯಣಶರ್ಮ್ಮಣೇಕೌಣ್ಡಿನ್ಯಗೋತ್ರಾಯಕಪೋತಶರ್ಮ್ಮಣೇಕಾನ್ವಾಯನಗೋತ್ರಾಯಕಾಚಿಟ್ಟಶ

47 ರ್ಮ್ಮಣೇವತ್ಸಗೋತ್ರಾಯ ರಾಜಶ್ರೀಶರ್ಮ್ಮಣೇ ಆತ್ರೇಯಗೋತ್ರಾಯನಾಗಶರ್ಮ್ಮಣೇ ಹಾರೀತಗೋತ್ರಾಯನಾಗಶರ್ಮ್ಮಣೇವಿ
ಶ್ವಾಮಿತ್ರ

48 ಗೋತ್ರಾಯಮಗುಸಶರ್ಮ್ಮಣೇವಿಷ್ಣುವೃದ್ಧಗೋತ್ರಾಯ ಕುಪ್ಪಶರ್ಮ್ಮಣೇಭಾರದ್ವಾಜಗೋತ್ರಾಯ ಗುಳಗದಿದಸೋಮಯಾಜಿ
ನೇಕೌಶಿಕ

49 ಗೋತ್ರಾಯಮಾರಶರ್ಮ್ಮಣೇಕಾಶ್ಯಪಗೋತ್ರಾಯಗೋಯಿನ್ದಶರ್ಮ್ಮಣೇವತ್ಸಗೋತ್ರಾಯಮಾಧವಶರ್ಮ್ಮಣೇಉಕ್ಥ್ಯಯಾಜಿ

೪ನೇ ಪತ್ರದ ಹಿಂಭಾಗ.

50 ನಚ್ಪುತ್ರೇಣಜ್ಯೇಷ್ಠೇನಶಿವಮಾರಶರ್ಮ್ಮಣಾಷಟ್ತ್ರಿಂಶದ್ಭಾಗಾನ್ಪುನರ್ದ್ವಿಚತ್ವಾರಿಂಶದ್ಭಾಗಾನ್ಕೃತ್ವಾಸ್ವಪಿತೃಪಿತೃವ್ಯಪುತ್ರಾಣಾಂ

51 ಷಣ್ಣಾಂದ್ವಾದಶಭಾಗಾನಪನೀಯಸ್ವಭ್ರಾತೃನಸುಜ್ಞಾಪ್ಯಆತ್ಮನಶ್ಚತುರಾಭಾಗಾನಾದಾಯಅನ್ಯೇಭಾಗಾಯಥಾಲಿಖಿತೇಭ್ಯೋಬ್ರಾ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

52ಹ್ಮಣೇಭ್ಯೋದತ್ತಾಃಕೌಶಿಕಗೋತ್ರಾಯದ್ರೋಣಭಟ್ಟಾಯದ್ವೌಆಶ್ಮರಥ್ಯಗೋತ್ರಾಯರುದ್ರಶರ್ಮ್ಮಣೇಸೋಮಯಾಜಿನೇದ್ವೌಕಾಶ್ಯ
ಪಗೋತ್ರಾ

53ಯಏಚಿಶರ್ಮ್ಮಣೇಪಾಧ್ಯಾಯಾಯಸಾರ್ಧಏಕಃಭಾರದ್ವಾಜಸಗೋತ್ರಾಭ್ಯಾಂರಂಗಪ್ರಶರ್ಮ್ಮಣೇದ್ವೌದುರ್ಗಶರ್ಮ್ಮಣೇಹಿತಾಗ್ನಯೇಏ
ಕಃಶಾಂಡಿ

54ಲ್ಯಸಗೋತ್ರೇಭ್ಯೋವಿನಯಶರ್ಮ್ಮಣೇಸಾರ್ಧಏಕಯಜ್ಞಶರ್ಮ್ಮಣೇಏಕಃನನ್ದಶರ್ಮ್ಮಣೇಏಕಃಕೌಣ್ಡಿನ್ಯಸಗೋತ್ರೇಭ್ಯಃಗಣ

55ಶರ್ಮ್ಮಣೇಸಾರ್ಧಏಕಃಮಾಧವಶರ್ಮ್ಮಣೇಏಕಃಶಿವಶರ್ಮ್ಮಣೇಏಕಃಆತ್ರೇಯಸಗೋತ್ರೇಭ್ಯಃಕೊತ್ತಶರ್ಮ್ಮಣೇಹಿತಾಗ್ನಯೇಏಕಃ

56ಬಾಲಕಶರ್ಮ್ಮಣೇದ್ವೌ ಆಲಶರ್ಮ್ಮಣೇದ್ವೌ ದೈತಶರ್ಮ್ಮಣೆ ದ್ವೌ ಮಾರಶರ್ಮ್ಮಣೇಸಾರ್ಧಏಕಃ ಯಜ್ಞಶರ್ಮ್ಮಣೇಏಕಃ ದುರ್ಗಶ
ರ್ಮ್ಮಣೇಏಕಃ

57ಅಸ್ಯಗ್ರಾಮಸ್ಯಪ್ರಾವ್ಯಾದಿಸೀಮಾವ್ಯವಸ್ಥಾಕಿಟಿನಾಸಂಗತಮಹಾಪಥನಿವೃಪ್ರದೇಶಾತುಪವಕ್ಕೊರ್ಲ್ಕಿಜುಕೊಣ್ಣಿನ್ದತಟಾಕ

58ಶಿಲೋಚ್ಚಯಃಪೆರ್ಗ್ಗಣ್ಣಿನ್ನತಟಾಕಪೂರ್ವ್ವಭಾಗಇರ್ಗ್ಗರೆನದೀಗತ್ವಾಸೇವನದ್ಯೇವದಕ್ಷಿಣಸೀಮಾವೆಳ್ಕರೆನಾಮ್ನೈವಪಶ್ಚಿಮಸೀ

೫ನೇ ಪತ್ರದ ಮುಂಭಾಗ.

59ಮೈವಗತ್ವಾಬೆಮ್ಬಪ್ಪಾಟ್ಸಿಹಿತಂಸೆರಾಲ್ಗೊಲ್ಲಿಂಗತ್ವಾಉತ್ತರತಃನೇಸಜುಪಳ್ಳಂಸೇಟಿವೆಣ್ಣಿಕಿಜುಬ್ಬಳ್ಳಿಯೂರ್ಕ್ಕಜೆಸೆಳ್ಳಕೆಱೆ

60ನಿಡುವೆತ್ತಕೆಱೆಕೊಲ್ಲಿಸಹಿತಾಅಸ್ಯದಾನಸ್ಯಸಾಕ್ಷಿಣಃಚಾತುರ್ವ್ವೈದ್ಯಸಹಿತಾಃಷಣ್ಣವತಿಸಹಸ್ರವಿಷಯಪ್ರಕೃತಿಃ

61ಯಃಆಸ್ಥಾಯಿಕಾಪುರುಷಶ್ಚಸರ್ವ್ವಾನಿತ್ಥಮಾಜ್ಞಾಪಯತಿರಾಜಾಷ್ಚಪ್ರಿಯಃವಿದಿತಮಸ್ತುಭವದ್ಭಿರಿದಸ್ಮಾನಂಸರ್ವ್ವಪರಿಹಾರಯು

62ಕ್ತಂಸ್ವದತ್ತಾನಿರ್ವ್ವಿಶೇಷಂಪರಿಪಾಲನೀಯಂಯೋರಕ್ಷತಿಸಪುಣ್ಯಭಾಗ್ಭವತಿಯೋಸ್ಯಗ್ರಾಮಸ್ಯಸಿದ್ಧಾಯಮುಪಹರೇಲ್ಲೋಭಾದ್ಬಾ

63ಧೇತವಾಸಪಞ್ಚಭಿರ್ಮ್ಮಹದ್ಭಿಃಪಾತಕೈಸ್ಸಂಯುಕ್ತೋಭವತಿಅಪಿಚಾತ್ರಮನುಗೀತಾಃಶ್ಲೋಕಾಃಸ್ವನ್ದಾತುಂಸುಮಹಚ್ಛ

64ಕ್ಯಂದುಃಖಮನ್ಯಸ್ಯಪಾಲನಂದಾನಂವಾಪಾಲನಂವೇತಿದಾನಾಚ್ಛ್ರೇಯೋನುಪಾಲನಂಸ್ವದತ್ತಾಂಪರದತ್ತಾಂವಾಯೋಹರೇತವಸುನ್ಧ
ರಾಂಷ

65ಷ್ಟಿಂವರ್ಷಸಹಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃಬ್ರಹ್ಮಸ್ವಂನ್ತುವಿಷಂಘೋರಂನವಿಷಂವಿಷಮುಚ್ಯತೇವಿಷಮೇಕಾಕಿನಂಹನ್ತಿ
ಬ್ರಹ್ಮ

66ಸ್ವಂಪುತ್ರಪೌತ್ರಿಕಂ ಪಾರ್ಥಿವೇನ್ದ್ರಾನ್ ಸಾಮಾನ್ಯೋಯಂ

67ಧರ್ಮ್ಮಸೇತುರ್ನೃಪಾಣಾಂಕಾಲೇಕಾಲೇರಕ್ಷಣೀಯಂಕ್ರಮೇಣವಿಶ್ವಕರ್ಮ್ಮಸಮಾನೇನವಿಶ್ವಕರ್ಮ್ಮಾಚಾರ್ಯ್ಯೇಣೇದಂಶಾಸನಂಲಿ
ಖಿತಂ ॥

114

ಕೊಪ್ಪದ ಹೋಬಳಿ ಕೌಡ್ಲೆ ಗ್ರಾಮದ ಹೆಬ್ಬಾಗಿಲು ಬಳಿ ಇರುವ ಕಲ್ಲಿನಲ್ಲಿ.

ಪ್ರಮಾಣ 5′ 6″ × 2′.

1ಶುಭಮಸ್ತುನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋ
2ಕ್ಯನಗರಾರಂಭಮೂಲಸ್ತಂಭಾಯಶಂಭವೇಸ್ವಸ್ತಿಶ್ರೀವಿಜಯಾಭ್ಯು
3ದಯಶಾಲೀವಾಹನಶಕವರ್ಷ ೧೫೮೫ ಸಂದುವರ್ತಮಾನವಾದಶೋಭ
4ಕೃತುಸಂವತ್ಸರದಆಷಾಢಶುದ್ಧದ್ವಾದಶಿಸೋಮವಾರಪುಣ್ಯಕಾಲದ
5ಲುಕಾವೇರೀಮಧ್ಯವರ್ತಿಯಾದಶ್ರೀರಂಗಪಟ್ಟಣವೆಂಬಗೌತಮಕ್ಷೇತ್ರದಲ್ಲಿರಂಗ
6ನಾಥಸ್ವಾಮಿಚರಣಾರವಿಂದಸಂನಿಧಿಯಲ್ಲಿಶ್ರೀಮದ್ರಾಜಾಧಿರಾಜ
7ಪರಮೇಶ್ವರರಾಜಶ್ರೀವೀರಪ್ರತಾಪಬಿರುದಂತೆಂಬರಗಂಡಧರಣೀವರಾಹಬಿ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

8 ರುದನಾನಾವರ್ನಮಕುಟಮಂಡಲಿಕರಗಂಡದೇವರಾಜವೊಡೆಯರಕು
9 ಮಾರದೇವರಾಜಮಹೀಪಾಲಕರುಶ್ರೀರಂಗಪಟ್ಟಣಸಿಂಹ್ವಾಸನಾಧೀಶ್ವರರಾಗಿಸು
10 ಖದಿಂಪೃಥ್ವೀರಾಜ್ಯಂಗೆಯುತ್ತ ತಾಉಮಾಡಿದಂಥಾಕೂಡಲಿಯೆಂಬಗ್ರಾಮ
11 ಕ್ಕೆ ಪ್ರತಿನಾಮಧೇಯವಾದದೇವರಾಜಪುರವೆಂಬಅಗ್ರಹಾರದಶಿಲಾಶಾಸ
12 ನದಕ್ರಮವೆಂತೆಂದರೆಯಿಾದಿನದಲ್ಲುಆತ್ರೇಯಸಗೋತ್ರದಆಶ್ವಲಾಯನ
13 ಸೂತ್ರದಋಕುಶಾಖೆಯಚಾಮರಾಜವೊಡೆಯರಪೌತ್ರರಾದದೇವರಾಜ
14 ವೊಡೆಯರಪುತ್ರರಾದದೇವರಾಜಮಹೀಪಾಲಕರುತಾಉತಮಗೆವಿ
15 ಕ್ರಮಾರ್ಜಿತವಾಗಿಬಂದಕೆಳಲಿನಾಡಿನಮದ್ದೂರೆಂಬಗ್ರಾಮ

(ಇನ್ನು 18 ಪಙ್ಕ್ತಿಗಳ ಅಕ್ಷರ ಚನ್ನಾಗಿ ಕಾಣುವದಿಲ್ಲ.)

115

ಮಂಡ್ಯದ ತಾಮ್ರಶಾಸನ. *

ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ ॥ ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಸಪಾತುವಃ । ಹೇಮಾದ್ರಿಕಲಶಾಯತ್ರಧಾತ್ರೀಛತ್ರಶ್ರಿಯಂದಧೌ ॥ ಕಲ್ಯಾಣಾಯಾಸ್ತುತದ್ಧಾಮಪ್ರತ್ಯೂಹತಿಮಿರಾಪಹಂ ಯದ್ಗಜೋಪ್ಯಗಜೋದ್ಭೂತಂವಿಷ್ಣುನಾಪಿಚಪೂಜ್ಯತೇ ॥ ಅಸ್ತಿಕ್ಷೀರಮಯಾದ್ದೇವೈಃಮಥ್ಯಮಾನಾನ್ಮಹಾಂಬುಧೇಃ । ನವನೀತಮಿವೋದ್ಭೂತಂಅಪನೀತತಮೋಮಹಃ ॥ ತಸ್ಯಾಸೀತ್ತನಯಸ್ತಪೋಭಿರತುಳೈರನ್ವರ್ಥನಾಮಾಬುಧಃಪುಣ್ಯೈರಸ್ಯಪುರೂರವೋಭುಜಬಲೈರಾಯುರ್ದ್ವಿಷಾಂಸಿಷ್ಣುತಃ । ತಸ್ಯಾಯುರ್ನಹುಷೋಸ್ಯತಸ್ಯತನಯೋಜಜ್ಞೇಯಯಾತಿಕ್ಷಿತೌಖ್ಯಾತಸ್ತಸ್ಯಚತುರ್ವಸುರ್ವಸುನಿಭಃಶ್ರೀದೇವಯಾನೀಪತೇಃ ॥ ತದ್ವಂಶೇದೇವಕೀಜಾನಿಃದಿದೀಪೇತಿಮ್ಮಭೂಪತಿಃ । ಯಶಸ್ವೀತುಳುವೇಂದ್ರೇಷುದಧೌಕೃಷ್ಣಇವಾಹ್ವಯಂ ॥ ತತೋಭೂದ್ಬುಕ್ಕಭೂಜಾನಿರೀಶ್ವರಕ್ಷಿತಿಪಾಲಕಃ । ಅಜಾತಸುಗುಣಭ್ರಂಶೋಮೌಳಿರತ್ನಂಮಹೀಭುಜಾಂ ॥ ಸರಸಾದುದಭೂತ್ತಸ್ಮಾತ್‌ನರಸಾವನಿಪಾಲಕಃ । ದೇವಕೀನಂದನಾತ್ಕಾಮೋದೇವಕೀನಂದನಾದಿವ ॥ ಕಾವೇರೀಮಾಶುಬಧ್ವಾಬಹುಳಜಲರಯಾಂಯೋವಿಲಂಘ್ಯೈವಸೇತುಂಜೀವಗ್ರಾಹಂಗೃಹೀತ್ವಾಸಮಿತಿಭುಜಬಲಾತ್ತಂಚರಾಜ್ಯಂತದೀಯಂ । ಕೃತ್ವಾಶ್ರೀರಂಗಪೂರ್ವಂತದಿಹನಿಜವಶೇಪತ್ತನಂಯೋಬಭಾಸೇಕೀರ್ತಿಂಸ್ತಂಭಂನಿಧಾಯತ್ರಿಭುವನಭವನೇಸ್ತೂಯಮಾನಾಪದಾನಃ ॥ ಚೇರಂಚೋಳಂಚಪಾಂಡ್ಯಂತದಪಿಚಮಧುರಾವಲ್ಲಭಂಮಾನಭೂಷಂವೀರ್ಯೋದಗ್ರಂತುರುಷ್ಕಂಗಜಪತಿನೃಪತಿಂಚಾಪಿಜಿತ್ವಾತದನ್ಯಾನ್ । ಆಗಂಗಾತೀರಲಂಕಾಪ್ರಥಮಚರಮಭೂಭೃತ್ತಟಾಂತರ್ನಿತಾಂತಂಖ್ಯಾತಕ್ಷೋಣೀಪತೀನಾಂಸ್ರಜಮಿವಶಿರಸಾಶಾಸನಂಯೋವ್ಯತಾನೀತ್ ॥ ವಿವಿಧಸುಕೃತೋದ್ಧಾಮೇಸೋಮೇಶ್ವರಪ್ರಮುಖೇಮುಹುರ್ಮುದಿತಹೃದಯಸ್ಥಾನೇಸ್ಥಾನಂನ್ಯಧತ್ತವೃಥಾವಿಧಿಃ । ಬುಧಪನಿಕರಂನಾನಾದಾನೇನಯೋಭುವಿತೋಷಯನ್ತ್ರಿಭುವನಜನೋದ್ಗೀತಂಪೀತಂಯಶಃಪುನರಾತ್ತವಾನ್ ॥ ತಿಪ್ಪಾಜಿನಾಗ್ವಲಾದೇವ್ಯೋಃಕೌಸಲ್ಯಾಶ್ರೀಸುಮಿತ್ರಯೋಃ । ದೇವ್ಯೋರಿಹನೃಸಿಹ್ಮೇಂದ್ರಾತ್ತಸ್ಮಾತ್ಪಙ್ಕ್ತಿರಥಾದಿವ ॥ ವೀರೌವಿನಯಿನೌರಾಮಲಕ್ಷ್ಮಣಾವಿವನಂದನೌ । ಜಾತೌವೀರನೃಸಿಂಹೇಂದ್ರಕೃಷ್ಣರಾಯಮಹೀಪತೀ ॥ ವೀರಶ್ರೀನರಸಿಹ್ಮಸ್ಸ್ವವಿಜಯನಗರೇರತ್ನಸಿಹ್ಮಾಸನಸ್ಥಃಕೀರ್ತ್ಯಾನಿತ್ಯಂನಿರಸ್ಯನೃಗನಳನಹುಷಾನಪ್ಯಥಾನ್ಯಾನ್ವದಾನ್ಯಾನ್ । ಆಸೇತೋರಾಸುಮೇರೋರವನಿಸುರನುತಃಸ್ವೈರಮಾಚೋದಯಾದ್ರೇಃಆಪಾಶ್ಚಾತ್ಯಾಚಲಾಂತಾತ್ ಸಕಲಹೃದಯಮಾವರ್ಜರಾಜ್ಯಂಶಶಾಸ ॥ ನಾನಾದಾನಾನ್ಯಕಾರ್ಷೀತ್ಕನಕಸದಸಿಯಃಶ್ರೀವಿರೂಪಾಕ್ಷದೇವಸ್ಥಾನೇಶ್ರೀಕಾಳಹಸ್ತಿಶಿಖರನಗರೇವೇಂಕಟಾದ್ರೌಚಕಾಂಚ್ಯಾಂ । ಶ್ರೀಶೈಲೇಶೋಣಶೈಲೇಮಹತಿಹರಿಹರೇಹೋಬಳೇಸಂಗಮೇಚಶ್ರೀರಂಗೇಕುಂಭಕೋಣೇಹತತಮಸಿಮಹಾನಂದತೀರ್ಥೇನಿವೃತ್ತೌ ॥ ಗೋಕರ್ಣೇರಾಮಸೇತೌಜಗತಿತದಿತರೇಷ್ವಪ್ಯಶೇಷೇಷುಪುಣ್ಯಸ್ಥಾನೇಷ್ವಾರಬ್ಧನಾನಾವಿಧಬಹುಳಮಹಾದಾನವಾರಿಪ್ರವಾಹೈಃ । ಯಸ್ಯೋದಂಚತ್ತುರಂಗಪ್ರಕರಖುರರಜಃಶುಷ್ಯದಂಭೋಧಿಮಗ್ನಕ್ಷ್ಮಾಭೃತ್ಪಕ್ಷಚ್ಛಿದೋದ್ಯತ್ಕುಲಿಶಧರಭಯಾಕುಂಠಿತಾಭೂತ್ ॥ ಬ್ರಹ್ಮಾಂಡಂವಿಶ್ವಚಕ್ರಂಘಟಮುದಿತಮಹಾಭೂತಕಂರತ್ನಧೇನುಂಸಪ್ತಾಂಭೋಧೀಶ್ಚಕಲ್ಪಕ್ಷಿತಿರುಹಫಲಕೇಕಾಂಚನೀಂಕಾಮಧೇನುಂ । ಸ್ವರ್ಣಕ್ಷ್ಮಾಂಯೋಹಿರಣ್ಯಾಶ್ವರಥಮಪಿತುಲಾಪೂರುಷಂಗೋಸಹಸ್ರಂಹೇಮಾಸ್ತ್ರಂಹೇಮಗರ್ಭಂಕನಕಗಿರಿರಥಂಪಂಚಲಾಂಗೂಲ್ಯತಾನೀತ್ ॥ ರಾಜ್ಯಂಪ್ರಶಾಸ್ಯನಿರ್ವಿಘ್ನಂರಾಜ್ಯಂದ್ಯಾಮಿವಶಾಸಿತುಂ । ತಸ್ಮಿನ್ನುಗ್ಗಣೇನವಿಖ್ಯಾತೇಕ್ಷಿತೇರಿಂದ್ರೇದಿವಂಗತೇ ॥ ತತೋಪ್ಯವಾರ್ಯವೀರಶ್ರೀಃಕೃಷ್ಣರಾಯಮಹೀಪತಿಃ । ಬಿಭರ್ತಿಮಣಿಕೇಯೂರನಿರ್ವಿಶೇಷಂಮಹೀಭುಜೇ ॥ ಕೀರ್ತ್ಯಾಯಸ್ಯಸಮಂತತಃಪ್ರಸೃತಯಾವಿಶ್ವಂರುಚೈಕ್ಯಂವ್ರಜೇದಿತ್ಯಲಕ್ಷ್ಯಪುರಾಪುರಾರಿರಭವತ್ಫಾಲೇಕ್ಷಣಃಪ್ರಾಯಶಃ । ಪದ್ಮಾಕ್ಷೋಪಿಚತುರ್ಭುಜೋಜನಿಚತುರ್ವಕ್ತ್ರೋಭವತ್ಪದ್ಮಭೂಃಕಾಳೀಖಡ್ಗಮಥಾದ್ರಮಾಚಕಮಲಂವೀಣಾಂಚವಾಣೀಕರೇ ॥ ಶತ್ರೂಣಾಂವಾಸಮೇತೇದದತಇತಿರುಷಾಕಿನ್ನುಸಪ್ತಾಂಬುರಾಶೀಂನಾನಾಸೇನಾತುರಂಗತ್ರುಟಿತವಸುಮತೀಧೂಳಿಕಾಪಾಳಿಕಾಭಿಃ । ಸಂಶೋಷ್ಯಸ್ವೈರಮೇತತ್ಕ್ಷಿತಿನಿಧಿ ಜಲಧಿಶ್ರೇಣಿಕಾಂಯೋವಿಧತ್ತೇಬ್ರಹ್ಮಾಂಡಸ್ವರ್ಣಮೇರುಪ್ರ

* ಸ್ಥಲದವರು ಮಾಡಿದ ಪ್ರತಿಯಿಂದ.

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

ಮುಖನಿಜಮಹಾದಾನತೋಯೈರಮೇಯೈಃ ॥ ಮದ್ದತ್ತಮರ್ಥಿಸಾರ್ಥಃ ಪ್ರಿಯಮಿಹಸುಚಿರಂಭುಜ್ಯತಾಮಿತ್ಯವೇಕ್ಷ್ಯ । ಪ್ರಾಯಃಪ್ರತ್ಯೂಹ ಹೇತೋಃತಪನರಥಗತೇರಾಲಯಂದೇವತಾನಾಂ ॥ ತತ್ತದ್ದಿಗ್ಜೈತ್ರವೃತ್ತ್ಯಾಪಿಕಬಿರುದಪದ್ಯೈರಂಕಿತಾಸ್ತತ್ರತತ್ಯೈಸ್ತಂಭಾಃಪ್ರತಿಷ್ಠಾಪ್ಯವ್ಯಾತನುತ ಭುವಿಯೋಭೂಭೃದಭ್ರಂಕಷಾಗ್ರಾ । ಕಾಂಚೀಶ್ರೀಶೈಲಶೋಣಾಚಲಕನಕಸಭಾವೇಂಕಟಾದ್ರಿಪ್ರಮುಖ್ಯೇಷ್ವೇತೇಷ್ವಾಹತ್ಯಸರ್ವೇಷ್ವತನುತ ವಿಧಿವದ್ಭೂಯಸೇಶ್ರೇಯಸೇಯಃ ॥ ದೇವಸ್ಥಾನೇಷುತೀರ್ಥೇಷ್ವಪಿಕನಕತುಲಾಪೂರುಷಾದಿನಿನಾನಾದಾನಾನ್ಯೋಸೋಪಧಾನ್ಯೈರಪಿಸಮುಖಿ ಲೈರಾಗಮೋಕ್ತಾನಿತಾನಿ ॥ ರೋಷಕೃತಪ್ರತಿಪಾರ್ಥಿವದಂಡಃಶೇಷಭುಜಕ್ಷಿತಿರಕ್ಷಣಶೌಂಡಃ । ಭಾಷೆಗೆತಪ್ಪುವರಾಯರಗಂಡಃತೋಷಕೃತಾರ್ಥಿ ಷುಯೋರಕ್ಷಣದಂಡಃ ॥ ರಾಜಾಧಿರಾಜಇತ್ಯುಕ್ತ್ಯೋಯೋರಾಜಪರಮೇಶ್ವರಃ । ಮೂರುರಾಯರಯುದ್ಧಾಂಕಃಪರರಾಯಭಯಂಕರಃ ॥ ಹಿಂ ಧುರಾಯಸುರತ್ರಾಣೋದುಷ್ಟಶಾರ್ದೂಲಮರ್ದನಃ । ವೀರಪ್ರತಾಪಇತ್ಯಾದಿಬಿರುದೈರುಚಿತ್ರೈರ್ಯುತಃ ॥ ಆಲೋಕಯಮಹಾರಾಜಜಯತ್ವಿ ತ್ಯೇವವಾದಿಭಿಃ । ಸಮುಸೇತೋಃಕಳಿಂಗಾದ್ಯೈಃರಾಜಭಿಸೇವ್ಯತೇಚಯಃ ॥ ಸ್ತುತ್ಯೌದಾರ್ಯಾಂಶಧೀಭಿಸ್ಸವಿಜಯನಗರೇರತ್ನಸಿಹ್ಮಾಸನಸ್ಥಃಕ್ಷ್ಮಾಪಾ ಲಾಃಕೃಷ್ಣರಾಯಕ್ಷಿತಿಪತಿರಧರೀಕೃತ್ಯನಿತ್ಯಾನ್ನೃಗಾದೀನ್ । ಆಪೂರ್ವಾದ್ರೇರಥಾಸ್ತಕ್ಷಿತಿಧರಕಟಕಾದಾಚಹೇಮಾಚಲಾಂತಾದಾಸೇತೋರರ್ಥಿ ತಾರ್ಥಃಶ್ರಿಯಮಿಮಬಹುಳೀಕೃತ್ಯಕೀರ್ತ್ಯಾಸಮಿಂಧೇ ॥ ಶಾಲೀವಾಹನನಿರ್ಣೀತಶಾಬ್ದೇಸಚತುಶ್ಶತೈಃಅಷ್ಟತ್ರಿಂಶಸಮಾಯುಕ್ತೇಸಂಖ್ಯಾತೇ ದಶಭಿಶ್ಶತೈಃ । ಧಾತುಸಂವತ್ಸರೇಮಾಸಿಕಾರ್ತಿಕೇಪೂರ್ಣಿಮಾತಿಥೌ ॥ ತುಂಗಭದ್ರಾಪಗಾತೀರೇಬಿಟ್ಟಲೇಶ್ವರಸನ್ನಿಧೌ । ಘೃತಪರ್ವತದಾನಸ್ಯಸ ಮಯೇಭಾನುವಾಸರೇ ॥ ಶ್ರೀಭಾರದ್ವಾಜಗೋತ್ರಾಯವರಾಪಸ್ತಂಭಸೂತ್ರಿಣೇ । ಯಶಸ್ವಿನೇಯಜುಶ್ಶಾಖಾಧ್ಯಾಯಿನೇಗುಣಶಾಲಿನೇ ॥ ಅನ್ವಿ ಷ್ಯವೇಂಕಟೇಶೇನವಿತೀರ್ಣಕುಸುಮಸ್ರಜೇ । ಅನಂತಾಚಾರ್ಯವರ್ಯಸ್ಯವಂಶವಾರಾಕರೇಂದವೇ । ಪ್ರತಿಷ್ಠೋಭಯವೇದಾಂತತಂತ್ರವ್ಯಾಖ್ಯಾ ಪಟೀಯಸೇ ॥ ವಿಶಿಷ್ಟಾಚಾರ್ಯವೇಷಾಯಶೇಷಾಯವಿದುಷಾಂಮುದೇ । ಪದವಾಕ್ಯಪ್ರಮಾಣೇಷುಪರಾಂಪ್ರೌಢಿಮುಪೇಯುಷೇ ॥ ವ್ಯಾಖ್ಯಾ ತಾಖಿಲಶಾಸ್ತ್ರಾಯಪ್ರಖ್ಯಾತಗುಣಸಂಪದೇ । ವರದಾಚಾರ್ಯವರಸ್ಯಸೂನವೇಸೂನೃತೋಕ್ತಯೇ ॥ ಗೋವಿಂದರಾಜಗುರವೇತರವೇಸು ಧಿಯಾಂದಿವಃ । ತಾದೃಶೇಹೊಸಳೇದೇಶೇವಿಖ್ಯಾತಸ್ವಧಿಕಶ್ರುತಂ ॥ ಶ್ರೀರಂಗಪಟ್ಟಣಸ್ಯಾಪಿಸೀಮಾಯಾಮಪಿಹಿತಂಸ್ಥಿತಂ । ಕೃಷ್ಣರಾಯಪುರಂ ಚೇತಿಪ್ರತಿನಾಮೋಪಶೋಭಿತಂ ॥ ಕೊತ್ತಿವರದನಹಳ್ಳಿಯಾಃಸ್ರಾಚೀಮಾಶಾಮುಪಸ್ಥಿತಂ । ದಕ್ಷಿಣೇಹುಲಿವಾನಾಖ್ಯಸಾತನೂರೇತಿವಿಶ್ರುತಂ ॥ ಗ್ರಾಮಾಚ್ಚಗುತ್ತಲಾಹ್ವಾನಾತ್ಪಶ್ಚಿಮಾಯಾಂದಿಶಿಸ್ಥಿತಂ । ಗ್ರಾಮಾಚ್ಚರಾಮಹಳ್ಳೀಯಾಉತ್ತರಾಯಾಂದಿಶಿಸ್ಥಿತಂ ॥ ಚಿಕ್ಕಮಂಡೀಯಯುಕ್ತಂ ಚಕಲ್ಲಹಳ್ಳಿಸಮನ್ವಿತಂ । ಸಂಯುಕ್ತಂಹೊಸಹಳ್ಳ್ಯಾಚತಂಡಸೇಹಳ್ಳಿಸಂಶ್ರಿತಂ ॥ ಕೋಣಹಳ್ಳಿಸಮಾಯುಕ್ತಂಗ್ರಾಮಂಮಂಡಯನಾಮಕಂ । ಸರ್ವಮಾನ್ಯಂಚತುಸ್ಸೀಮಾಸಂಯುಕ್ತಂಚಸಮಂತತಃ ॥ ನಿಧಿನಿಕ್ಷೇಪಪಾಷಾಣಸಿದ್ಧಸಾಧ್ಯಜಲಾನ್ವಿತಂ । ಅಕ್ಷಿಣ್ಯಾಗಾಮಿಸಂಯುಕ್ತಮೇಕ ಭೋಗ್ಯಂಸಭೂರುಹಂ ॥ ವಾಪೀಕೂಪತಟಾಕೈಶ್ಚಕಚ್ಛೇನಾಪಿಸಮನ್ವಿತಂ । ಪುತ್ರಪೌತ್ರಾದಿಭಿರ್ಭೋಜ್ಯಂಕ್ರಮಾದಾಚಂದ್ರತಾರಕಂ ॥ ದಾನ ಸ್ಯವಿನಯಸ್ಯಾಪಿವಿಕ್ರಯಸ್ಯಾಪಿಕೋಚಿತಂ । ಪರಿತಃಪ್ರಯತ್ಯೈಸ್ನಿಗ್ಧೈಃಪುರೋಹಿತಪುರೋಗಮೈಃ ॥ ವಿವಿಧೈರ್ವಿಬುಧೈಶ್ಶ್ರೋತ್ರಪಂಡಿತೈಃಪಥಿ ಕೈರ್ಯುತಃ । ಕೃಷ್ಣರಾಯೋಮಹಾದೇವೋಮಹಾರಾಯೋಮನಸ್ವಿನಾಂ ॥ ಸಹಿರಣ್ಯಪಯೋಧಾರಾಪೂರ್ವಕಂದತ್ತವಾನ್ಮುದಾ । ತೈಸ್ತೈಸ್ಸಮ ನ್ವಿತಶ್ಚಿಹ್ನೈಃದಿಕ್ಷುಪ್ರಾಚ್ಯಾದಿಷುಕ್ರಮಾತ್ ॥ ಸೀಮಾನ್ಯಸ್ಯಾಗ್ರಹಾರಸ್ಯಲಿಖ್ಯಂತೇದೇಶಭಾಷಯಾ ॥..........

116

ಮಂಡ್ಯದ ಹೋಬಳಿ ಹಳೇ ಬೂದನೂರು ಸೋಮೇಶ್ವರ ದೇವಸ್ಥಾನದ ಬಳಿ ವೀರಕಲ್ಲು.

ಹಳಕನ್ನಡಕ್ಷರ.—ಪ್ರಮಾಣ 6′ 2″ × 3′.

1 ಸ್ವಸ್ತಿಸಮಸ್ತವಿನೆಯಗುಣಸಂಪಂನನುಂವಿಪ್ರಜನವಿನುತ
2 ನುಂಸ್ವಜನಪ್ರಸಂನನುಂಸ್ವಗೋತ್ರಪ್ರವರ್ತ್ತಿತನುಂಸ್ವಸ್ತಿ
3 ಶ್ರೀಮತುಕನ್ನಯ್ಯನಮಗರಾಜೇನ್ದ್ರಚೋಳಕುನ್ದುನ್ನಾಡಾಳ್ವತನ್ನೂರತುಱುಗೊಳಂಕಱಿದುಸತ್ತುಸಗ್ಗಗತನಾದ

117

ಅದೇ ದೇವಸ್ಥಾನದ ಬಳಿ ಬಿದ್ದಿರುವ ವೀರಕಲ್ಲು.

ಪ್ರಮಾಣ 9′ 6″ × 3′ 6″.

1 ಸ್ವಸ್ತಿಸಮಸ್ತವಿನೆಯಗುಣಸಂಪನ್ನನುಂಸ್ವಜನಗೋತ್ರಪವಿತ್ರತನುಂವ
2 ....ಗದಸ..ರುದಗೊತಳಿವ..ಗೊಲದಾಡಿವಲರಬಲುಗಂಡಕೂಡಿತ
3 ....ಯರಕೂ.........ದೊ.........
4 ....

5 ....ಳಹೊಯ್ಸಳ
6 . ರ ....ಗದೇವನಂದನಸಂ
7 ವತ್ಸರದ ....ಆ....
8 . .ದೇವನ ....ಯಹಾಳಿದಲವಂನೆಯೊಳಗೆಕಾದಿತಳ್ತಿಱಿದುಸ
9 ....ಯಚ್ಚರಸಯರುತತುಕ್ಷಣದೊಳು ......
10 ....

(ಇನ್ನು ಕೆಲವು ಪಙ್ತಿಗಳು ಸುತರಾಂ ಕಾಣುವದಿಲ್ಲ.)

118

ಅದೇ ಗ್ರಾಮದ ದೊಡ್ಡಿಹೊಲದಲ್ಲಿ ಬಿದ್ದಿರುವ ಕಲ್ಲಿನಲ್ಲಿ.

ಹಳಕನ್ನಡಕ್ಷರ.—ಪ್ರಮಾಣ 2′ × 1′ 3″.

1 ಶ್ರೀಕೀಲಕಸಂವತ್ಸರ
2 ದಪುಷ್ಯಸು ೧೫ ಲೋದು
3 ....ಯದೆಹಾರದದಾಸ
4 ಣ್ಣನವರಮಕಳಚಿಕ್ಕ
5 ವಡೆಗ . . ಮಗಹಂದ
6 ಗಮಾರಂಗೆಕೊಟ್ಟಕೊಡಿಗೆ
7 ....ಯೆರೆ ೨೦೦

119

ಅದೇ ಹೋಬಳಿ ಹೊಸ ಬೂದನೂರು ಗ್ರಾಮದ ಕಾಶೀವಿಶ್ವೇಶ್ವರ ದೇವಸ್ಥಾನದ ವಿಮಾನದ ಉತ್ತರ ಭಿತ್ತಿಯಮೇಲೆ.

ತೆಲುಗುಭಾಷೆ.—ಪ್ರಮಾಣ 9″ × 1′.

1 ರುಧಿರೋದ್ಗರಿಸಂವಛ್ಚರಂ
2 ಬಾದ್ರಪದಬೌಳ ೩ ಶನಿವಾ
3 ರಂನಾಡುಶ್ರೀಮತ್‘ಕಾಸಿವಿ
4 ಸ್ವೇಸ್ವರಸ್ವಾಮಿವಾರಿದಿವ್ಯಶ್ರೀ
5 ಪಾದಪದ್ಮಲುದರಿಶನಂಶೇಸಿ
6 ರುಪಾಛ್ಚನನಂಸಿದ್ಧೆಯ್ಯಯಲ್ಲೆಯ್ಯ
7 ಕಾಳೈಯ್ಯ

120

ಅದೇ ಗ್ರಾಮದ ಅನಂತಪದ್ಮನಾಭ ದೇವಸ್ಥಾನದ ಒಳಗೆ ರಂಗಮಂಟಪದ ಕಂಭದ ಬುಡದಲ್ಲಿ.

1 ಕಾಮಯಹೆಬಾರುವ
2 ನಮುಗಮಲ್ಲರಸಯ
3 ನಬರಹ

121

ಬಸರಾಳು ಹೋಬಳಿ ಬಸರಾಳು ಗ್ರಾಮದ ಮಲ್ಲೇಶ್ವರ ಅಥವ ನಾಗೇಶ್ವರ ದೇವಸ್ಥಾನದ ದಕ್ಷಿಣ ಬಾಗಲಿನ ಬಳಿ ಯಿರುವ ಕಲ್ಲಿನಲ್ಲಿ.

ಪ್ರಮಾಣ 7′ 6″ × 3′ 7″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಳೋಕ್ಯನಗರಾರಂಭಮೂಲಸ್ತಂಭಾಯಶಂಭವೇ ॥ ಶ್ರೀವಧುಮೂರ್ತಿನೆಕ್ಕಸರದಂತುರದೊಳ್‌ನಲಿವಂತುವಿಕ್ರ

2 ಮಶ್ರೀವಧುಬಾಹುಪೂರಕದವೊಲ್‌ಭುಜದೊಳ್‌ನಲಿವಂತುಕೀರ್ತಿದಿಗ್ದೇವಿಯರೊಳ್‌ನಿಜಾಜ್ಞೆವೆರಸಾದರದಿಂನಲಿವಂತುಧರ್ಮ್ಮಲಕ್ಷ್ಮೀವರನಾಗಿಪಾಳಿ

Staatsbibliothek zu Berlin. - Signatur: Ph 10130-3
Reproduktion, Vervielfältigung oder Weitergabe nur mit Genehmigung

3 ಸಿದನುರ್ವ್ವರೆಯಂನರಸಿಂಹಭೂಭುಜಂ ॥ ಆಪ್ರತಾಪಚಕ್ರವರ್ತ್ತಿಯನ್ವಯಾವತಾರವೆಂತೆಂದೊಡೆ ॥ ಹರಿನಾಭೀಕಮಳಕ್ಕೆ ಪುಟ್ಟಿ
ದಜನಿಂಸಂದತ್ರಿಯಿಂ

4 ಸೋಮನಿಂದೊರೆವೆತ್ತ ಬುಧನಿಂಪುರೂರವನಿನಾಯುಬ್ಭೂರ್ಪನಿಂರಾಜಶೇಖರನಪ್ಪಂನಹುಶಂಕನಿಂನಯಯಯಾತಿಶ್ರೇಷ್ಠನಿಂಕ್ಷಾ
ತ್ರಮಂದಿರನಾದಂಯದುವಾತನಿಂಯದುಕುಲಂಪ್ರ

5 ಖ್ಯಾತಮಾಯ್ತುರ್ಬ್ಬಿಯೊಳ್ ॥ ಸಳನೆಂಬಯಾದವಂಪೊಯ್ಸಳನಾದಂದಿವ್ಯಮುನಿವರಂಹುಲಿಯಂಹೊಯ್ಸಳಯೆನೆನಿಶ್ಶಂಕಂಹೊ
ಯ್ಸಳವೆಸೆದಿರೆಶಶಕಪುರದವಾಸಂ

6 ತಿಕೆಯೊಳ್ । ಆದಿವರಾಹಂಕೊಡೊಳ್ಮೇದಿನಿಯಂತಳೆವತೆಱದಿನೂರ್ಜ್ಜಿತಸತ್ವಂಮೇದಿನಿಯಂತಳೆದಂವಿನಯಾದಿತ್ಯಂದೋಃಪ್ರತಾ
ಪದಿಂಹೊಯ್ಸಳರೊಳ್ ॥ ವಿನ

7 ಯಾದಿತ್ಯನನಂದನಂನಿಜಭುಜಾವಷ್ಟಂಭದಿಂವಿಶ್ವಮೇದಿನಿಯಂತಾಳ್ದಿದನಾಜಿವೀರನೆಱೆಯಂಗಂಹರ್ಷಮಂತಾಳ್ದಿಮಿತ್ರನಿಕಾಯಂ
ನಿಜಶತ್ರುಗಳ್ಗೆ ಭಯಮನೆತ್ತಂತಾಳ್ದಿ

8 ಭೀತಾನತರ್ಗ್ಘನಸಂಪತ್ತಿಯನೆಯ್ದಿತಾಳ್ದಿದಿಗಧೀಶರ್ತ್ತಾಳ್ದಿತಂನಾಜ್ಞೆಯಂ ॥ ಪೆಸರ್ಗ್ಗೊಂಡಾವಾವದೇಶಂಗಳನೆಣಿಸುವುದಾವಾವ
ದುರ್ಗ್ಗಂಗಳಂಬಣ್ಣಿಸಿಪೇಳು

9 ತ್ತಿಪ್ಪುರ್ದಾವಾವವನಿಪತಿಗಳಂಲೆಕ್ಕಿಸುತ್ತಿಪ್ಪುರ್ದೆಂಬೊಂದೆಸಕಂಕಯ್ಗಣ್ಮೆನಾಲ್ಕುಂಕಡಲಕಡೆವರಂದಿಗ್ಜಯೋತ್ಸಾಹದಿಂಸಾಧಿಸಿ
ದಂವಿಕ್ರಾ

10 ನ್ತದಿಂಸಂದೆಱಗನೃಪತಿಯಾತ್ಮೋದ್ಭವಂಬಿಟ್ಟದೇವಂ ॥ ದೊರೆವಡೆದವಿಷ್ಣುವರ್ದ್ಧನನರನಾಥನಸೂನುಗೋವಿನ್ನೀಮುಖತಿಳಕಂಪ
ರನೃಪಹಿರಣ್ಯಕಾಸುರನರಸಿಂ

11 ಹಂರೂಢಿವಡೆದವಿಜಯನೃಸಿಂಹಂ ॥ ಆವಿಜಯನಾರಸಿಂಹಮಹೀವಲ್ಲಭನಗ್ರಮಹಿಷಿಗಾಪಟ್ಟಮಹಾದೇವಿಗೆಪೆಸರ್ವ್ವೆತ್ತೇಚಲದೇವಿ
ಗೆಬಲ್ಲಾಳದೇವನುದ

12 ಯಂಗೆಯ್ದಂ ॥ ಉರದೊಳ್ಸಪ್ತಾಂಗಲಕ್ಷ್ಮೀವಧುವಿಜಯಭುಜಾದಂಡಪೊಳ್ವಿಕ್ರಮಶ್ರೀಧರೆಯೊಳ್ತಂನಾಜ್ಞೆತನ್ನೊಳ್ ನೃಗನ
ಳನಹುಷಕ್ಷತ್ರಧರ್ಮ್ಮಂಪದಾಬ್ಜೋದರದೊಳ್ಭೀತಾನ

13 ತೌಘಂಸುಖಮಿರೆಪರಮೋತ್ಸಾಹದಿಂವಿಶ್ವವಿಶ್ವಂಭರೆಯಂದೋರ್ದ್ದಂಡದೊಳ್ತಾಳ್ದಿದನತುಳಬಳಂವೀರಬಲ್ಲಾಳದೇವಂ ॥ ಆಚಕ್ರೇ
ಶನಸೂನುವೀರನರಸಿಂಹಂಚೋಳರಾಯಪ್ರ

14 ತಿಷ್ಠಾಚಾರ್ಯ್ಯಂಮಗರಾಧಿರಾಯಲಯಕಾಳಂಪಾಂಡ್ಯಸಾಮ್ರಾಜ್ಯಸಂಕೋಚಾಧಾಯಿಪರಾಕ್ರಮಂಧರೆಯನಾಳ್ದಂಲೀಲೆಯಿಂವೀ
ರಲಕ್ಷ್ಮೀಚಂಚನ್ಮಣಿಹಾರನಂಬುಧಿಗಭೀ

15 ರಂರಾಜವಿದ್ಯಾಧರಂ ॥ ಕೆಲದೊಳ್ಕೇಳಿತಮಂಸಂವರಿಸಿಹಿಡಿವಳ್ಪಾಳಗೋವಂತುರುಷ್ಕಂಬಲಮುಖ್ಯಾಧ್ಯಕ್ಷದಿಂದಂನಡೆವಹ
ಡೆವಳಂಚೋಳನುಚ್ಚಂ

16 ದಬಾಹಾಬಲದಿಂಮೆಯ್ದೋರ್ಪ್ಪಮಾವಂತರಬಳ್ವೆಸದೊಳ್ಗೌಳನಿಂನಾವರಾಯತ್ತರ್ಲೆದೋರ್ಪ್ಪನ್ನಾರಸಿಂಹಂಗತುಳಸನುರಸಿಂ
ಹಂಗೆವಿಕ್ರಾಂತದಿಂದಂ ॥

17 ನಡೆವಂನಂನಾರಸಿಂಹಕ್ಷಿತಿಪತಿಗವನೀಪಾಳರೆಲ್ಲಿರ್ದ್ದಪರ್ಬ್ಬರ್ಳ್ವಿಡಿವಂನಂಕ್ಷತ್ರಿಯಸ್ವರ್ಗ್ಗಂಗರಪಮಯದೊಳಾನ್ನಿರ್ಗ್ಗಂದಪದ್ದುರ್ಗ್ಗ
ಮಂಪೊಕ್ಕೊಡಮುರ್ಬ್ಬೀಪಾಳರಂ

18 ಪೆಣ್ಣುಡೆಯನುಡಿಸುವಂತನ್ನದೋರ್ದ್ದಂಡಶೌರ್ಯ್ಯಂಪೊಡೆಕಿಚ್ಚಂಕಾಸುತಿರ್ಕ್ಕುಂಕಡೆಯರಸುಗಳಂತನ್ನತೇಜಪ್ರತಾಪಂ ॥ ಸ್ವ
ಸ್ತಿಸಮಧಿಗತಪಂಚಮಹಾ

19 ಶಬ್ದಮಹಾಮಂಡಲೇಶ್ವರಂ । ದ್ವಾರಾವತೀಪುರವರಾಧೀಶ್ವರಂ । ಯಾದವಕುಳಾಂಬರದ್ಯುಮಣಿ । ಸರ್ಬ್ಬಜ್ಞಚೂಡಾಮಣಿ । ಮ
ಲೆರಾಜರಾಜ । ನಪ್ರತಿಮತೇಜಂ । ಮಲೆಪರೊಳ್ಗಂ

20 ಡಂಕದನಪ್ರಚಂಡನಸಹಾಯಶೂರನೇಕಾಂಗವೀರಂಗಿರಿದುರ್ಗ್ಗಮಲ್ಲಂರಿಪುಹೃದಯಭಲ್ಲಂಚಲದಂಕರಾಮಂಬಿರುದಂಕಭೀಮಂಹೊ
ಯ್ಸಳಕುಲಕ

21 ಮಳಮಾರ್ತ್ತಾಂಡಂಗಂಡಭೇರುಂಡಂಕಾಡವರಾಯಕಂದಕುದ್ದಾಳಂಮಗರರಾಯಮಸ್ತಕಶೂಲಂಸೇವುಣರಾಯದರ್ಪ್ಪದಳನಬಾಹು
ಶೌರ್ಯ್ಯಂಚೋಳರಾಯಪ್ರತಿಷ್ಠಾಚಾರ್ಯ್ಯಂ

22 ಪಾಂಡ್ಯರಾಯಪನ್ನಗವೈನತೇಯಂನಿಶ್ಶಂಕಪ್ರತಾಪಚಕ್ರವರ್ತ್ತಿಹೊಯ್ಸಳಶ್ರೀವೀರನಾರಸಿಂಹರಾಯಂನಿಜರಾಜಧಾನಿದೊರಸಮು
ದ್ರದೊಳ್ಸುಖಸಂಕ

Staatsbibliothek zu Berlin. - Signatur: **Ph 10130-3**
Reproduktion, Vervielfältigung oder Weitergabe nur mit Genehmigung

23 ಥಾವಿನೋದದಿಂಪೃಥುವೀರಾಜ್ಯಂಗೆಯುತ್ತುಮಿರ್ದ್ದನಾಪ್ರತಾಪಚಕ್ರವರ್ತ್ತಿಗನ್ವಯಾಗತಪ್ರಧಾನಂಪ್ರಧಾನಚೂಡಾರತ್ನಂನಿಯೋ
ಗಯೋಗಂಧರಂಪತಿಕಾರ್ಯ್ಯ

24 ಧುರಂಧರಂ ॥ ಸಾಲವುಂನೆಯಬೇಂಟೆಕಾಱನುದ್ದಂಡಗಂಡಭಂಗಾಱಂನಾಲ್ವತ್ತುನಾಯಕರಗಂಡಂ । ಸಮರಪ್ರಚಂಡನಾಶ್ರಿತಜನ
ಕಲ್ಪವೃಕ್ಷಂಶರಣ

25 ಜನರಕ್ಷಾದಕ್ಷಂಬಂಧುಜನಚಿಂತಾಮಣಿಶಿವಭಕ್ತಚೂಡಾಮಣಿಶ್ರೀಮತುಹರಿಹರದೇವರದಿವ್ಯಶ್ರೀಪಾದಾರಾಧಕಂ ಪರಬಲಸಾಧಕ
ನೆನಿಸಿದಡ್ಡಾಯಿದದ

26 ಹರಿಹರದಣ್ಣಾಯಕನನ್ವಯಾವತಾರವೆಂತೆಂದೊಡೆ ॥ ತೆನದಂಕಾನ್ವಯ ಮೇರುಚಿಕ್ಕಹಡೆವಳ್ಳಂಪ್ರೀತಿಯಿಂವಿಷ್ಣುವರ್ದ್ಧನದೇವಂ
ಕುಡೆರಾಜ್ಯಚಿಹ್ನವೆನಿಸಲ್‌ಸಾಲ್ದಿರ್ದ್ದ

27 ವಂದಿವ್ಯವಾಹನವುಂದಂಡಿಗೆಯುಂಪೊಡಳ್ದಡಪವುಂಪಿಂಚ್ಛಾತಪತ್ರಾನ್ವಿತಾಸನವುಂತಾಂಪಡೆದಂದಿಟಕ್ಕವನೆದಲ್‌ಸ್ವಾಮಿಪ್ರಸಾದಾ
ಸ್ಪದಂ ॥

28 ಭೋಗನಿಧಿಪತಿಹಿತಬ್ರತೆನಾಗಲೆಗಂಚಿಕ್ಕಹಡೆವಳ್ಳಂಗಂಧಂವ್ಮ್ಯೋದ್ಯೋಗಂಮಲ್ಲೆಯನಾಯಕನಾಗೌರೀಶಗ್ಗೆಷಣ್ಮುಖನಪೊಲೊ
ಗೆದಂ ॥ ಅಂಮಂವೆನೆಥ

29 ರೆಗುಜ್ಜಲೆಗಂಮಲ್ಲೆಯನಾಯಕಂಗವನ್ವಯತಿಳಕತ್ರ್ಯಂಮೆಸೆವಮೂವರುಂಜನಸಂಮತಧಂವ್ಮ್ಯಾರ್ತ್ಥಕಾಮದಂತೊಗೆತಂದರ್‌॥
ಎಱೆಯನಕಯ್ದುಸಂಗರಕೆಸಿಂಗೆಯನಾಯಕನಾತನಿಂ

30 ದೆನೆಗ್ಗಱೆಯನುದಾರವಾರಿನಿಧಿಮಾರೆಯನಾಯಕನಾತನಿಂದೆನೆಗ್ಗಱೆಯನಿಳಾನುತಂಹರಿಹರಧ್ವಜಿನೀಪತಿಯಿಂತಿವಜ್ಜಗಕ್ಕು
ಱುವರದೇನನುಂಡವುಮುಪೆತ್ತಳೊತಾಯ್ವೆಸರ್ವೆತ್ತಮೂ

31 ವರಂ ॥ ಆಪುರುಷನಿಧಾನವೊಳಗೆ ॥ ಚರಿತಂಗಂಗಾನದೀಸಂಗಮಸಹಚರವಾಸ್ಯೇಂದುಸತ್ಯಾಮೃತಶ್ರೀಭರಿತಂಲಕ್ಷ್ಮೀವಿಳಾಸಂದ್ವಿಜ
ಗುರುಬುಧಗೋತ್ರಾದಿಸದ್ದಾನದೀಕ್ಷಂಗುರುಚಿತ್ತಂ

32 ಪಾರ್ವ್ವತೀವಲ್ಲಭಪದಕಮಳಧ್ಯಾನಸಂಧಾನಸಾರಂನರಸಿಂಹೋರ್ವ್ವೀಶನಡ್ಡಾಯ್ದದಹರಿಹರಂಲೋಕದೊಳ್‌ತಾನೆಧಂನ್ಯಂ ॥ ಸಿರಿ
ಯಂತಕ್ಕಲ್ಲಿಗಿಂತಿತ್ತನತೆಱದೆಬಿಯಂಗೆ

33 ಯ್ಯಬಾರ್ವ್ವೆಲ್ಲರೆಂಬಂತಿರೆಕನ್ಯಾದಾನ ಭೂದಾನದೊಳನುಪರೆಗೋದಾನದೊಳ್‌ದೇವತಾಮಂದಿರವಿದ್ಯಾದಾನದೊಳ್‌ವಾಹನಕನಕಪ
ಯೋಬಾನದೊಳ್‌ಪೇಂವ್ಮ್ಯಾವೆತ್ತಂನರಸಿಂಹೋ

34 ರ್ವ್ವೀಶನಡ್ಡಾಯದದಹರಿಹರಂದಂಡನಾಥಾಗ್ರಗಣ್ಯಂ ॥ ಕಡುಪಿಂಮುತ್ತಿದವೀರಸೇವುಣರಸೈನ್ಯಾನೀಕವುಂಪೊಕ್ಕುಮೆಯ್ದುಡೆಕೊಂ
ದಿಕ್ಕಿದನೊಕ್ಕಲಿಕ್ಕಿತುಳಿದಂಪೆಂಸಟ್ಟದಂಮೆಟ್ಟ

35 ದಂಪಿಡಿದಂಸಾಲೆತುರಂಗಮಂಹರಿಹರಂತಂನೊಂದೆಜಾತ್ಯಶ್ವದಿಂಗಡವಿಶ್ವಾವನಿಮೆಚ್ಚೆಮಂತ್ರಿತಿಲಕಂವಿದ್ವಿಷ್ಟವಿದ್ರಾವಣಂ ॥ ಮೊ
ದಲಿಂದಂಕಳಶಂಬರಂಮೆಱೆವನಾನಾಚಿತ್ರಪ

36 ತ್ರಂಗಳಿಂಮುದವಂಬೀಱುವಭಾರತಾದಿಕಥೆಯಂಪೆಮ್ಪುವೃತ್ತಕೂಟಂಗಳಿಂದಿದುಪಾಂಚಾಳಿಕೆತಳ್ತಮೇರುಗಿರಿಯೋಪೇಳಂಬಿನಂವಿ
ಭ್ರವಮಾಸ್ಪದವಾಗಿಪ್ಪ್ಪದುಮಲ್ಲಿಕಾರ್ಜ್ಜು

37 ನಮದೇ .....ದೇವಾಲಯಂ ॥ ಜನನಿಯಹೆಸರಿಂದಂಕೆಱೆಜನಕನಹೆಸರಿಂದೆದೇವತಾಗೃಹವೆಸದಿಪ್ಪನೆಗಂಮಾಡಿಸಿದನ್ನಿ
ಜತನಯುಮ್ಮ್ಯಾವರುಮಿದೇಂಕೃತಾರ್ತ್ಥರೊ

38 ಜಗದೊಳ್‌ ॥ ಸ್ವಸ್ತಿಶ್ರೀಮತುಸಕವರ್ಷ೧೧೩೬ನೆಯಜಯಸಂವತ್ಸರದವೈಶಾಖಶುದ್ಧ೧ ಸೋಮವಾರರೋಹಿಣೀನಕ್ಷತ್ರದಂದು
ತಂಮತಂದೆಯಹೆಸರಮಲ್ಲಿಕಾರ್ಜ್ಜುನದೇವ

39 ರಂಬಸುರಿವಾಳೊಳ್‌ಸುಪ್ರತಿಷ್ಠೆಯಂಮಾಡಿಯಾದೇವರಶ್ರೀಕಾರ್ಯ್ಯಕ್ಕೆನಾರಸಿಂಹದೇವರಸರಕಯ್ಯಲುಧಾರೆಯಂಹಡೆದುತಾವು
ಆಬಸುರಿವಾಳೊಳ್‌ಬಿಟ್ಟದ

40 ತ್ತಿಯವಾವುವೆಂದೊಡೆಚತುಸ್ಸೀಮೆಸಹಿತಬೆಳೆಯಹಳ್ಳಿ । ಬಣುರಿವಾಳಹಿರಿಯಕೆಱೆಯಕೆಳಗೆಗದ್ದೆಸ ೬ ಕೊಂ ಹಡವಳನಹ
ಳ್ಳಿಯಕೆಱೆಯಕೆಳಗೆಗ

41 ದ್ದೆಸ ೬ ಕೊಂ ಗುಜ್ಜವ್ವೆನಾಯಕಿತಿಯಕೆಱೆಯಕೆಳಗೆಸ೪ ಎಕ್ಕೆಹಟ್ಟಿಯಕೆಱೆಯಕೆಳಗೆಸ೩ ಅನ್ತುಗದ್ದೆಸ ೧೦ ಬೆದ್ದಲುಹಿರಿ
ಯೂರಿಂಹಡವಳನಹಳ್ಳಿಗೆಹೋ

42 ದದೊಣಿಯಿಂತೆಂಕಣಹಾ೦ನಲ್ಲಿಸೆದ್ದಲುಕಂಬ ೩೦ಂ ಹಡವಳನಹಳ್ಳಿಯಬಡಗಣನೀಱುಗಲ್ಲಹಾಳಿನಲ್ಲಿಕಂಬ ೩೦ಂ ಕೋಡಿಯಹ
ಳ್ಳಿಯಂಮೂಡಣ

[43]ಹುಲ್ಲೆಯಹಾಳಲುಕಂಬ ೫೦ಂ ಅನ್ತುಬೆದ್ದಲು ೨೦ಂಂ ಬಸುರಿವಾಳಹಿರಿಯಕೆಱೆಯತೂಬಿನಿಂತೆಂಕಲುಹಂತಂಕಾಲದೊಡ್ಡರಳಿಯು
ಗೊಂದಿವರೆಗಂದೇವರಹೂದೋಟದಭೂ

[44]ಮಿ ‖ ಈದತ್ತಿಯೊಳಗೆಗದ್ದೆಬೆದ್ದಲಿಂದಈದೇವರನಿವೇದ್ಯಕ್ಕೆನಡೆವನಿತ್ಯಪಡಿಅಕ್ಕಿ ಕೊ ‖ ತೊಗರಿಯಬೇಳೆ ಬ೧ ಮಾನ೧ ನಂದಾ
ದೀವಿಗೆಯೆಣ್ಣೆಬಳ್ಳ ೩ ಆಬೆಳೆಯುನಹಳ್ಳಿಯಸಿದ್ದಾಯದಿಂ

[45]ನಡೆವನಿತ್ಯಪಡಿತುಪ್ಪಮಾನ೧ ಱಲೆಕ್ಕದಿಂವರ್ಷವೊಂದಕ್ಕೆಗ ೨ ಪ ೫ ಉಪ್ಪುಮಾನ೧ ಱಲೆಕ್ಕದೆವರ್ಷವೊಂದಕ್ಕಂಹಣ ೫ ಮೆಳಸ
ರವನದಲೆಕ್ಕದೆವರ್ಷವೊಂ

[46]ದಕ್ಕಂ ಗ೧ ಪ೨ ವೀಳೆಯದಡಕೆ ೩ಂ ಎಲೆ ೬ಂ ರಕ್ಕಂವರ್ಷವೊಂದಕ್ಕಂ ಗ ೨ ಧೂಪಕ್ಕೆವರ್ಷವೊಂದಕ್ಕ ಗ ೧ ದೇವರಂಗಲೇಪನದ
ಶ್ರೀಗಂಧಕ್ಕಂವರ್ಷವೊಂದಕ್ಕಂ ಗ ೫ ದೇವರವಸ್ತ್ರ ೧ ೨ ಡಕ್ಕಂ

[47]ತೆರೆಸೀರೆ ೩ ಕ್ಕಂ ಅಂತುಸೀರೆ ೧೫ ಕ್ಕಂ ಗ ೫ ಯಿಾನಿತ್ಯಪಡಿಗಳುಚೈತ್ರಪವಿತ್ರಗ್ರಹಣಶಿವರಾತ್ರಿವಿಷುವಯನಸಂಕ್ರಮಣಂಗಳಲ್ಲಿಪಡಿ
ಯಿಂಮಡಿಯಾಗಿನಡವುವು

[48]ಆಮಹಾತಿಥಿಗಳಹೋಮದ್ರವ್ಯಂಗಳಿಗೆಗ೧ ಚೈತ್ರಪವಿತ್ರದನೂಲುದವನವಸ್ತ್ರಂಗಳ್ಗೆ ಗ೧ ಅಷ್ಟಮಿಚತುರ್ದ್ದಸಿಗಳಲ್ಲಿಮಾಡುವ
ಪಂಚಾಮೃತದಸಬ್ಬುರೆಜೇನುತುಪ್ಪಕ್ಕೆ

[49]ಗ೧ ಬಹುಳಚತುರ್ದ್ದಸಿಗಳಲ್ಲಿಸಹಸ್ರಾಭಿಷೇಕಮುಹಮಜ್ಜನಂಗಳಎಣ್ಣೆಸೀಗೆಯಕಾಯಿಕರುಟವರಿಸಿನಕ್ಕಂ ಪ ೫ ಯಿಾಮರ್ಯ್ಯಾ
ದೆಯುಪರಿವಿಡಿಯು

[50]ದಲೆವರ್ಷಂಪ್ರತಿಆಚಂದ್ರಾರ್ಕ್ಕತಾರಂಬರಂನಡೆವುದುಮಂಗಳಮಹಾ ಶ್ರೀ ಶ್ರೀ ಶ್ರೀ ‖

122

ಕಾಳಲೆದೇವಿಗಮುರ್ವ್ವೀಪಾಳಕನೆನಿಸಿರ್ದ್ದನಾರಸಿಂಹನೃಪಂ

[51]ಗಂಲೀಲೆಮಿಗೆಪುಟ್ಟಿದಂಜಯಶೀಳಂಸೋಮೇಶ್ವರಂಮನೋಹರರೂಪಂ ‖ ನೆಲನಂಪೊತ್ತಿತ್ತೆನಾಳ್ವತ್ತನದೆಮಹಿಮೆಯಿಂಪೊಂಗು
ವಂಕೂರ್ಮ್ಮರಾಜಂತಲೆಯೆತ್ತಿಪ್ಪಂಫಣೀಶಂಮುದ

[52]ಮನೆಸಗುವಂದಿಗ್ಗಜೇಂದ್ರಂನಿತಾಂತಂಬಲಿದಿರ್ಪ್ಪಂಗೋತ್ರಭೂಭೃದ್ಧರಿಸಿದುನಗೆಯಿಂದುರ್ವ್ವಿಯಂನಿರ್ವ್ವಿಕಾರಂಬಲದೋಳೊಳ್
ತಾಳ್ದಿಪೆಂಪಂತಳೆದತುಳಬಳಂರಾಯರೊ

[53]ಳ್ಸೋವಿದೇವಂ ‖ ಅರಿವಕ್ಷೋರಂಗದೊಳ್ಕತ್ತಿಗೆವಿಜಯಭುಜಾದಂಡದೊಳ್ವಿಕ್ರಮಶ್ರೀಯಿರೆವಕ್ತ್ರಾಂಭೋಜದೊಳ್ವಾಗ್ವನಿ
ತೆನೆಲಸೆತಂನಾಜ್ಞೆವಿದ್ವಿಷ್ಟಭೂಪಾ

[54]ಳರಕೋಟೀರಂಗದೊಳ್ನರ್ತ್ತಿಸೆವಿಷದಯಸಂಪರ್ವ್ವವಾರಾಸಿತೀರಂಬರವಾಳ್ದಂವಿಶ್ವಧಾತ್ರೀತಳಮನತಿಬಳಂರಾಯರೊಳ್ಸೋವಿ
ದೇವಂ ‖ ಮುಂನಂರೂಡಿ

[55]ಯಕೃಷ್ಣಕಂಧರನುಮಂಮಾರ್ಕ್ಕೊಂಡುಚೋಳೋರ್ವ್ವಿಯಂನಿಂನಂತಾರೊಳುಪೊಕ್ಕು ಸಾದಿಸಿದರಾರ್ಪ್ಪಾಂಡ್ಯೇಶನಂಶೌರ್ಯ್ಯ
ದಿಂಬೆನ್ನಂಪತ್ತಿಸೆಸೋವಿದೇವಘಟೆಯಂಕೈಕೊಂಡರಾ

